


"ಮಕ್ಕಳ ಹಕ್ಕು" ಮಾನವ ಹಕ್ಕುಗಳಲ್ಲಿನ ಒಂದು ಭಾಗ, ಮಕ್ಕಳ ಹಕ್ಕುಗಳನ್ನು ರಕ್ಷಿಸಿ ಬೆಳೆಸಿದಲ್ಲಿ ಮಾನವ ಹಕ್ಕುಗಳನ್ನು ರಕ್ಷಿಸಿದಂತೆ. ಈ ಹಿನ್ನಲೆಯಲ್ಲಿ ದಾವಣಗೆರೆಯಲ್ಲಿ ಯುನಿಸೆಫ್ ಯೋಜನೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕಾರ್ಮಿಕ ಇಲಾಖೆ ಮತ್ತು ಸ್ವಯಂಸೇವಾ ಸಂಸ್ಥೆಗಳ ಆಶ್ರಯದಲ್ಲಿ "ಮಕ್ಕಳ ಹಕ್ಕುಗಳ" ಮತ್ತು ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಯ ಕ್ರಿಯಾ ಯೋಜನೆಯು ಉತ್ತಮವಾಗಿ ಅನುಷ್ಠಾನಗೊಂಡು ರಾಜ್ಯದಲ್ಲಿಯೇ ಮಾದರಿಯನ್ನು ಸೃಷ್ಟಿಸಿದೆ. ಅದಕ್ಕೆ ಈ ಪುಸ್ತಕವೇ ಒಂದು ಉದಾಹರಣೆ.

ಮಕ್ಕಳ ಹಕ್ಕುಗಳು ಮತ್ತು ಬಾಲಕಾರ್ಮಿಕತೆ ಬಗ್ಗೆ ಮಾಹಿತಿ ಇರುವ ಈ ಕಿರು ಹೊತ್ತಿಗೆ ಮಕ್ಕಳಿಗೆ ಮತ್ತು ಪ್ರತಿಯೊಬ್ಬ ನಾಗರಿಕರಿಗೆ ತುಂಬಾ ಅಗತ್ಯ. ನಮ್ಮ ರಾಜ್ಯದ ಎಲ್ಲಾ 18 ವರ್ಷದೊಳಗಿನ ಮಕ್ಕಳು ಸಂತೋಷದಿಂದ ಶಾಲೆಯಲ್ಲಿ ಇರುವುದೇ ನಮ್ಮ ಆಶಯ.

ಕೆ. ಎಸ್. ಮಂಜುನಾಥ, ಭಾ.ಆ.ಸೇ.
ಕಾರ್ಮಿಕ ಆಯುಕ್ತರು
ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರ,
ಬೆಂಗಳೂರು.

unicef
ಯುನಿಸೆಫ್ ಬಾಲಕಾರ್ಮಿಕ ಪದ್ಧತಿ ನಿರ್ಮೂಲನಾ ವಿಶೇಷ ಕ್ರಿಯಾ ಯೋಜನೆ,
ಜಿಲ್ಲಾಧಿಕಾರಿಗಳ ಕಛೇರಿ, ರೈತ ಭವನ, ಪಿ. ಬಿ. ರಸ್ತೆ, ದಾವಣಗೆರೆ - 577 002.
ದೂರವಾಣಿ : 08192-256459

# ಹಕ್ಕು



unicef
ದುಡಿಮೆ ಬೇಡ
ಶಿಕ್ಷಣ ಬೇಕು

# “ ಹಕ್ಕು ”

(“ಮಕ್ಕಳ ಹಕ್ಕುಗಳ” ಕುರಿತು ಮಕ್ಕಳಿಗೆ ಹಾಗೂ
ಸಮಾಜ ಸೇವಾ ಕಾರ್ಯಕರ್ತರಿಗಾಗಿ ಮಾಹಿತಿ ಮತ್ತು
ಶಾಲೆಗಳಲ್ಲಿ “ **ಮಕ್ಕಳ ಹಕ್ಕುಗಳ ಕ್ಲಬ್** ” ರಚಿಸಲು ಸೂಚನಾ ಕೈಪಿಡಿ)


ಕೊಣಿಲ ರಾಘವೇಂದ್ರ ಭಟ್

ಚಿತ್ರಗಳು : ಉಷಾ. ಪಿ. ಎ.



ಪ್ರಕಟಣೆ :
ಜಿಲ್ಲಾಡಳಿತ, ಯುನಿಸೆಫ್ ಬಾಲಕಾರ್ಮಿಕ ಪದ್ಧತಿ
ನಿರ್ಮೂಲನಾ ವಿಶೇಷ ಕ್ರಿಯಾ ಯೋಜನೆ,
ಜಿಲ್ಲಾ ಪಂಚಾಯತ್, ಸಾರ್ವಜನಿಕ ಶಿಕ್ಷಣ ಇಲಾಖೆ
ಮತ್ತು ಕಾರ್ಮಿಕ ಇಲಾಖೆ, ದಾವಣಗೆರೆ.

ಸಹಕಾರ : ಬೆಳಕು, ಗುರಿ, ಸೀಡ್ಸ್, ದಲಿತಮಹಾಸಭಾ,
ಸೇಂಟ್ ಜಾನ್ಸ್ ಮತ್ತು ಡಾನ್ ಬಾಸ್ಕೋ ಸಂಸ್ಥೆಗಳು ದಾವಣಗೆರೆ.





"HAKKU" A book on child rights for children's and
social workers, published by
Unicef, Child Labour Elimination Project, Davangere.

ಸಲಹಾ ವಂತಿಗೆ : ರೂ. 30/-
ಪ್ರತಿ : 2000
ಪುಟ : 96
ಮೊದಲ ಆವೃತ್ತಿ : ಆಗಸ್ಟ್ 2007



© : ಕಾದಿರಿಸಲಾಗಿಲ್ಲ. (ಮರು ಮುದ್ರಣ, ಬಳಸುವ ಮೊದಲೇ ಒಪ್ಪಿಗೆ
ಹಾಗೂ ಕೃಪೆ : ಯುನಿಸೆಫ್ ಯೋಜನೆ, ದಾವಣಗೆರೆ ಎಂದು
ಸೂಚಿಸುವುದು ಸ್ವಾಗತಾರ್ಹ.)



ಪರಿಕಲ್ಪನೆ : ಕೊಣಿಲ ರಾಘವೇಂದ್ರ ಭಟ್
ಸಂಯೋಜನೆ : ಹೆಚ್. ಕೆ. ಬಸವರಾಜ್ ಮತ್ತು ಈ. ಧನಂಜಯ
ಪ್ರಕಟಣೆ : ಜಿಲ್ಲಾಡಳಿತ, ಯುನಿಸೆಫ್ ಬಾಲಕಾರ್ಮಿಕ ಪದ್ಧತಿ
ನಿರ್ಮೂಲನಾ ವಿಶೇಷ ಕ್ರಿಯಾ ಯೋಜನೆ,
ಜಿಲ್ಲಾಧಿಕಾರಿಗಳ ಕಛೇರಿ, ರೈತಭವನ, ಪಿ. ಬಿ. ರಸ್ತೆ,
ದಾವಣಗೆರೆ - 577 002. ದೂರವಾಣಿ : 08192-256459
ಡಿಟಿಪಿ : ಗ್ಯಾಲಕ್ಸಿ ಗ್ರಾಫಿಕ್ಸ್ ಫೋ : 08192-235495
ಮುದ್ರಣ : ಗುಡ್ ಟಚ್ ಮೈಸೂರು ಫೋ : 0821-2512626

# ಶುಭಾಶಯ ನುಡಿ

"ಮಕ್ಕಳು" ಮಕ್ಕಳಾಗಿ ಬದುಕಬೇಕಾದರೆ ಅವರು ಮಕ್ಕಳಾಗಿಯೇ ಇರಬೇಕು. ಅವರು ಹಾಗೆ ಇರಬೇಕಾದರೆ ಅವರಿಗೆ ಅವರದ್ದೇ ಆದ "ಹಕ್ಕು" ಗಳನ್ನು ಅನುಭವಿಸಲು ಬಿಡಬೇಕು. ಆ ಹಕ್ಕುಗಳನ್ನು ನೇರವಾಗಿ ಮಕ್ಕಳು ಅರ್ಥಮಾಡಿಕೊಳ್ಳುವ ಹಾಗೆ ಈ ಪುಸ್ತಕದಲ್ಲಿ ವಿವರಿಸಲಾಗಿದೆ. ಇದನ್ನು ಮಕ್ಕಳಿಗಿಂತ ಹೆಚ್ಚು ನಾವು ದೊಡ್ಡವರು, ಜನಪ್ರತಿನಿಧಿಗಳು, ಅಧಿಕಾರಿಗಳು, ಶಿಕ್ಷಕರು ಅರ್ಥಮಾಡಿಕೊಳ್ಳಬೇಕು. ಆಗ ಮಾತ್ರ ನಾವು ಮಕ್ಕಳಿಗೆ ಮಕ್ಕಳ ಹಕ್ಕುಗಳಿಗನುಸಾರವಾಗಿ ಅವರೊಂದಿಗೆ ಇರಲು ಸಾಧ್ಯ. ಮಕ್ಕಳ ಸಮಸ್ಯೆಗಳಿಗೆ ನಾವು ಬಡತನ, ಅನಕ್ಷರತೆ, ನಿರುದ್ಯೋಗ ಮತ್ತು ಜನಸಂಖ್ಯೆಯ ಕಾರಣ ಹೇಳಿ ಅವರನ್ನು ಬಾಲಕಾರ್ಮಿಕ ಪದ್ಧತಿಯಂತಹ ಮೃತ್ಯುಕೂಪಕ್ಕೆ ತಳ್ಳಬಾರದು. ಅದರಿಂದ ಹೊರತಂದು ಕನಿಷ್ಠ 18 ವರ್ಷ ತನಕವಾದರೂ "ಶಿಕ್ಷಣ" ಪಡೆಯುಂತೆ ಮಾಡಬೇಕು. ಈ ರೀತಿ ಸಾರ್ವತ್ರಿಕ ಶಿಕ್ಷಣ, ಬಾಲಕಾರ್ಮಿಕ ಪದತಿ ಮುಕ್ತಿಗೆ ಮಕ್ಕಳ ಹಕ್ಕುಗಳನ್ನು ಅರಿತು ಉತ್ತಮ ನಾಗರಿಕನನ್ನಾಗಿ ತಯಾರು ಮಾಡವಲ್ಲಿ ಈ ಪುಸ್ತಕ ಎಲ್ಲರಿಗೂ ಒಂದು ಅಸ್ತ್ರವಾಗಲಿ.

S. A. Ravindranath

**ಎಸ್. ಎ. ರವೀಂದ್ರನಾಥ್**
ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ
ಸಕ್ಕರೆ ಮತ್ತು ಗ್ರಾಮೀಣ ನೈರ್ಮಲ್ಯ ಸಚಿವರು,
ಕರ್ನಾಟಕ ಸರ್ಕಾರ.



# ಮುನ್ನುಡಿ

ಯಾವುದೇ "ಗ್ರಾಮ" ಅಭಿವೃದ್ಧಿ ಆಗಬೇಕಾದರೆ ಆ ಗ್ರಾಮದ ಎಲ್ಲಾ ಮಕ್ಕಳಿಗೆ 18 ವರ್ಷ ತನಕ (ಕನಿಷ್ಠ10ನೇ ತರಗತಿ ತನಕ) ಶಿಕ್ಷಣ ದೊರಕಬೇಕು. ಅದಕ್ಕೆ ಆ ಗ್ರಾಮದ ಸಮಸ್ತ ಜನರು ಸ್ವಲ್ಪ ಶ್ರಮ ವಹಿಸಬೇಕಾಗುತ್ತದೆ. ಇದೊಂದು ಸಂಘಟಿತ ಪ್ರಯತ್ನದಲ್ಲಿ ಆಗಬೇಕು. ಈ ಹಿನ್ನೆಲೆಯ ಪ್ರಯತ್ನವನ್ನು ದಾವಣಗೆರೆ ಜಿಲ್ಲೆಯಲ್ಲಿ 2003 ರಿಂದ ನಡೆಸಲಾಗುತ್ತಿದೆ. 2006 ರಿಂದ ದಾವಣಗೆರೆ ತಾಲ್ಲೂಕಿನಲ್ಲಿ ಸರಕಾರಿ ಶಾಲೆಗಳಲ್ಲಿ "ಮಕ್ಕಳ ಹಕ್ಕುಗಳ ಕ್ಲಬ್" ಗಳನ್ನು ರಚಿಸಲಾಗುತ್ತಿದೆ. ಈ ಕ್ಲಬ್‌ನ ಸದಸ್ಯರಾದ ಮಕ್ಕಳಿಗೆ ಮಕ್ಕಳ ಹಕ್ಕುಗಳ ಬಗ್ಗೆ ಅರ್ಥಮಾಡಿಕೊಳ್ಳಲು ಈ ಪುಸ್ತಕವನ್ನು ಹೊರ ತರಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಸರಳವಾಗಿ, ಮಕ್ಕಳ ಹಕ್ಕು, ಬಾಲಕಾರ್ಮಿಕ ಪದ್ಧತಿ ಬಗ್ಗೆ ಮಾಹಿತಿ ನೀಡುವಲ್ಲಿ ಈ ಪುಸ್ತಕ ಮಹತ್ವದ ಪಾತ್ರ ನಿರ್ವಹಿಸಲಿದೆ.

ಇದನ್ನು ಶಾಲಾ ಶಿಕ್ಷಕರು, ಜನಪ್ರತಿನಿಧಿಗಳು, ಎಸ್‌ಡಿಎಂಸಿ ಸದಸ್ಯರು, ಗ್ರಾಮ ಪಂಚಾಯಿತಿ ಸದಸ್ಯರು ಓದಿ ಅರ್ಥಮಾಡಿಕೊಳ್ಳಬೇಕಾದ ಅಗತ್ಯವಿದೆ.

ಮಕ್ಕಳೇ, ಶಿಕ್ಷಕರೇ ..... ಈ ಪುಸ್ತಕವನ್ನು ಓದಿ ನಿಮ್ಮ ನಿಮ್ಮ ಶಾಲೆಯಲ್ಲಿ ಮಕ್ಕಳ ಹಕ್ಕುಗಳ ಕ್ಲಬ್ ರಚಿಸಿ ತನ್ಮೂಲಕ ಮಕ್ಕಳ ಅಭಿವೃದ್ಧಿ ಮೂಲಕ ಗ್ರಾಮದ, ದೇಶದ ಅಭಿವೃದ್ಧಿಗೆ ಮುಂದಾಗಿ.

ಅತ್ಯಂತ ಉತ್ತಮವಾಗಿ ಈ ಹೊತ್ತಿಗೆಯನ್ನು ಹೊರತರುವಲ್ಲಿ ಶ್ರಮಿಸಿದ ಎಲ್ಲಾ ಸ್ವಯಂ ಸೇವಾ ಸಂಸ್ಥೆಯ ಕಾರ್ಯಕರ್ತರಿಗೆ, ಯುನಿಸೆಫ್ ಯೋಜನೆಯ ಸಿಬ್ಬಂದಿಗೆ ಅಭಿನಂದಿಸಿ ಈ ಪುಸ್ತಕವನ್ನು ನಿಮ್ಮ ಕೈಗೆ ನೀಡುತ್ತಿದ್ದೇನೆ.

**ಮಲ್ಲಿಕಾರ್ಜುನ ಬಿ. ದ್ಯಾಬೇರಿ**
ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು,
ಯುನಿಸೆಫ್, ಬಾಲಕಾರ್ಮಿಕ ಪದ್ಧತಿ ನಿರ್ಮೂಲನಾ
ವಿಶೇಷ ಕ್ರಿಯಾಯೋಜನೆ, ದಾವಣಗೆರೆ.

# ನನಗನ್ನಿಸಿದ್ದು

ಈ ಪುಸ್ತಕವನ್ನು ಓದಿ ಯೋಚಿಸಿ ನನಗೆ ಅನಿಸಿದ ಅಂತರಂಗದ ಮಾತುಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ ನಮ್ಮಂತಹ ಮಕ್ಕಳಿಗೂ ಇರುವ ಹಕ್ಕುಗಳ ಅರಿವನ್ನು ಈ ಪುಸ್ತಕದಿಂದ ತಿಳಿದು ತುಂಬಾ ಸಂತೋಷವಾಯಿತು ಹೋಟೆಲಿನ ಕೆಲಸಗಳನ್ನು ಇಷ್ಟವಿಲ್ಲದೆ ನಾನು ಅನಿವಾರ್ಯವಾಗಿ [illegible] [illegible] ಇಂದು [illegible] [illegible]. ತಂದೆ ತಾಯಿಗಳಿಗೆ ನಮಗೆ ಎಷ್ಟು ಮಕ್ಕಳಿದ್ದಾರೆ? ಎಂಬುದು ಮುಖ್ಯ ಪ್ರತಿಯೊಬ್ಬರೂ ಈ ಪುಸ್ತಕದಲ್ಲಿರುವ ಹಕ್ಕುಗಳನ್ನು ತಿಳಿದು ಕೊಳ್ಳಬೇಕು ನಾನು ಬಾಲಕಾರ್ಮಿಕನಾಗಿ ಅನುಭವಿಸಿದ ಕಷ್ಟವನ್ನು ಬೇರೆಯವರ ಮಕ್ಕಳು ಅನುಭವಿಸದ ಹಾಗೆ ನೋಡಿಕೊಳ್ಳಬೇಕು ಕೆಲವರು ಮಕ್ಕಳಿಂದ ಎಲ್ಲಾ ಕೆಲಸಗಳನ್ನು [illegible] [illegible] [illegible] ಸ್ವಾರ್ಥಕ್ಕಾಗಿ [illegible] ಆದರೆ ಮಕ್ಕಳಿಗೆ ನಾವು ಎಲ್ಲಾ [illegible] [illegible] [illegible] ಸ್ವತಂತ್ರ ಭಾವನೆ ಈ ಪುಸ್ತಕದಿಂದ ಮೂಡಿ ಬರುತ್ತಿದೆ ಪ್ರೀತಿಯ ತಂದೆ ತಾಯಿಗಳೇ ನಿಮ್ಮ ಮಕ್ಕಳನ್ನು ಓದಿಸಿ ಬೇರೆ ಮಕ್ಕಳನ್ನು ದುಡಿಸದೆ ಸಮಾಜದ ಹಕ್ಕುಗಳನ್ನು [illegible] [illegible] ಸಾಧಿಸಲು ನಮಗೂ ಒಂದು ಅವಕಾಶ ಕೊಡಿ

ಧನ್ಯವಾದಗಳು

ಇಂತಿ ನಿಮ್ಮ ಮಗ
[illegible]

[illegible]
ಮನೆ ಕೆಲಸ
8ನೇ ತರಗತಿ
[illegible]

V

# ನನ್ನ ಮಾತು

ಈ ಪುಸ್ತಕವನ್ನು ನಾನು ಓದಿ ತಿಳಿದುಕೊಂಡು ಅನೇಕ ವಿಷಯಗಳನ್ನು ಮನ ಬಿಚ್ಚಿ. ನಿಮ್ಮ ಮುಂದೆ ಇಡುತ್ತೇನೆ. ನಮ್ಮ ದೇಶದಲ್ಲಿ ಅನೇಕ ಮಕ್ಕಳು ತಂದೆ-ತಾಯಿ ಇದ್ದರೂ ಅನಾಥರಾಗಿ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಕೆಲಸ ಮಾಡುತ್ತಾ. ಅನೇಕ ನೋವುಗಳನ್ನು ಅನುಭವಿಸುತ್ತಿದ್ದಾರೆ. ಅವರಿಗೆ ಪ್ರೀತಿ ಗೊತ್ತಿಲ್ಲ. ಶಾಲೆಗೆ ಹೋಗಿಲ್ಲ ಸಂತೋಷ ಗೆಳೆತನದ ಅನುಭವವೇ ಇಲ್ಲ ಅವರು ಇರುವ ಸ್ಥಳ ಮತ್ತು ಅವರು ಮಾಡುವ ಕೆಲಸ ಬಿಟ್ಟರೆ ಬೇರೆ ಯಾವುದು ಅವರಿಗೆ ಗೊತ್ತಿಲ್ಲ. ಅವರಿಗೆ ಪುಸ್ತಕದಲ್ಲಿರುವ ಮಾಹಿತಿಯನ್ನು ತಿಳಿಸಿ ಅವರಿಗೂ ಒಂದು ಭವಿಷ್ಯ ರೂಪಿಸಿ ಕೊಡಿ. ಅವರು ದೇಶದ ಒಳ್ಳೆಯ ಪ್ರಜೆಯಾಗಲಿ. ಇಲ್ಲದಿದ್ದರೆ ಜ್ಞಾನವಿಲ್ಲದೆ ಬಡತನದಲ್ಲಿಯೇ ಬೆಂದು ಹೋಗುತ್ತಾರೆ ಅವರು ಮಾಲೀಕರು [illegible] ಮಾಡುವಾಗ ಈ ಪುಸ್ತಕದಲ್ಲಿರುವ ಶಿಕ್ಷೆಯನ್ನು ನೆನಪಿಸಿಕೊಳ್ಳಬೇಕು ನಮ್ಮ ದೇಶದ ಅಭಿವೃದ್ಧಿ ನಾಶವಾಗಲು ಕಾರಣವಾಗಿರುವ ಈ ಬಾಲ-ಕಾರ್ಮಿಕರ ಮಕ್ಕಳಿಂದಲ್ಲ. ಅದಕ್ಕೆ ಕಾರಣವಾಗಿರುವುದರಿಂದ ಎಂಬುದನ್ನು ಸ್ಪಷ್ಟವಾಗಿ ತಿಳಿಯಬೇಕಾದರೆ ಪ್ರತಿಯೊಬ್ಬರು ಈ ಪುಸ್ತಕವನ್ನು ಓದಲೇಬೇಕು ತಮ್ಮೆಲ್ಲರಿಗೂ ಧನ್ಯವಾದಗಳು

ಇಂತಿ ನಿಮ್ಮ ಮನೆಮಗ

[illegible] (7ನೇ ತರಗತಿ)
ಜೀತ ಕೆಲಸ (ಭದ್ರಾವತಿ)

VI

# ಆಶಯ ನುಡಿ

ಶಿಕ್ಷಕರೇ, ಮಕ್ಕಳೇ, ನಿಮ್ಮ ಶಾಲೆಯಲ್ಲಿ ಮಕ್ಕಳ ಹಕ್ಕುಗಳ ಕ್ಲಬ್ ಇದೆಯಾ? ನಿಮಗೆ ಮಕ್ಕಳ ಹಕ್ಕುಗಳ ಬಗ್ಗೆ ತಿಳಿದಿದೆಯೋ....? ಹೌದಾದರೆ ಸಂತೋಷ. ಇಲ್ಲವಾದರೆ ತಕ್ಷಣ ಈ ಪುಸ್ತಕ ಓದಿ. ನಿಮ್ಮ ಶಾಲೆಯಲ್ಲಿ ಇದನ್ನೇ ಜಿಲ್ಲಾ ಪಂಚಾಯತ್ ಮತ್ತು ಸಾ.ಶಿ. ಇಲಾಖೆಯ ಆದೇಶವೆಂದು ತಿಳಿದು **"ಮಕ್ಕಳ ಹಕ್ಕುಗಳ ಕ್ಲಬ್"** ಮಾಡಿ. ಮಕ್ಕಳ ಹಕ್ಕುಗಳ ಬಗ್ಗೆ ಅರಿತುಕೊಳ್ಳಿ. ನಿಮ್ಮ ಶಾಲೆಯನ್ನು ಬಾಲ ಕಾರ್ಮಿಕ ಮುಕ್ತ ಹಾಗೂ **"ಮಕ್ಕಳ ಸ್ನೇಹಿ"** ಶಾಲೆಯನ್ನಾಗಿ ಮಾಡುವುದಕ್ಕೆ ಈ ಹೊತ್ತಿಗೆ ಒಂದು ಅಸ್ತ್ರ.

"ಮಕ್ಕಳಿಗೆ" ಅವರು ಹಕ್ಕು ನೀಡುವುದು ಕೇವಲ ನಮ್ಮ ಕರ್ತವ್ಯ ಅಲ್ಲ. ಅದು ನಮ್ಮ ಹಕ್ಕು. ಹೀಗಾದಾಗ ಮಾತ್ರ ಅವರು ಮುಂದೆ ಈ ಸಮಾಜದಲ್ಲಿ ಎಲ್ಲರಂತೆ "ಸ್ವಾಭಿಮಾನದಿಂದ" ಬದುಕಲು ಸಾಧ್ಯ. ಈ ಹಿನ್ನೆಲೆಯಲ್ಲಿ ಮಕ್ಕಳ ಹಕ್ಕನ್ನು ಸ್ಪಷ್ಟವಾಗಿ, ನೇರವಾಗಿ ತಿಳಿಸುವಲ್ಲಿ ಈ ಪುಸ್ತಕ ಯಶಸ್ವಿಯಾಗಿದೆ.

ಎಲ್ಲಾ ಮಕ್ಕಳು ಈ ದೇಶದ ಪ್ರಜೆಗಳು ಎಂಬ ಸತ್ಯ ನಮಗೆ ತಿಳಿದಿರಲಿ, ಎಂದು ತಿಳಿಸುತ್ತಾ ಕಡ್ಡಾಯವಾಗಿ ದಾವಣಗೆರೆ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಎಲ್ಲಾ ಸರಕಾರಿ ಶಾಲೆಗಳಲ್ಲಿ ಮಕ್ಕಳ ಹಕ್ಕುಗಳ ಕ್ಲಬ್ ರಚಿಸಲು ಈ ಮೂಲಕ ಕೋರುತ್ತೇನೆ.

ಬಿ. ನಿಜಲಿಂಗಪ್ಪ
ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು
ಜಿಲ್ಲಾ ಪಂಚಾಯತ್, ದಾವಣಗೆರೆ.



# ಸೂಚನಾ ಪತ್ರ

ದಾವಣಗೆರೆ ಜಿಲ್ಲೆಯ ಎಲ್ಲಾ ಶಾಲಾ ಮುಖ್ಯೋಪಾಧ್ಯಾ-ಯರು, ಶಿಕ್ಷಕರು ಮತ್ತು ಎಸ್.ಡಿ.ಎಂ.ಸಿ. ಅಧ್ಯಕ್ಷರು ಮತ್ತು ಸದಸ್ಯರುಗಳೇ.......

ನಮ್ಮ ಜಿಲ್ಲೆಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕಾರ್ಮಿಕ ಇಲಾಖೆ, ಯುನಿಸೆಫ್ ಯೋಜನೆ ಮತ್ತು ಸಾ.ಶಿ. ಇಲಾಖೆಯ ಸಂಯೋಜನೆಯಲ್ಲಿ ಮಕ್ಕಳ ಹಕ್ಕುಗಳ ಕ್ಲಬ್‌ನ್ನು ರಚಿಸಲಾಗುತ್ತಿದೆ. ಆದ್ದರಿಂದ ಈ ಪುಸ್ತಕದ ಪುಟ 70ರಿಂದ 75 ರಲ್ಲಿ ತಿಳಿಸಿದಂತೆ ತಕ್ಷಣ ತಾವೇ ಮುತುವರ್ಜಿ ವಹಿಸಿ ತಮ್ಮ ಶಾಲೆಗಳಲ್ಲಿ "ಮಕ್ಕಳ ಹಕ್ಕುಗಳ ಕ್ಲಬ್" ರಚಿಸಿ ಅದರ ವರದಿಯನ್ನು ಜಿಲ್ಲಾಧಿಕಾರಿಗಳಿಗೆ ಮತ್ತು ನಮ್ಮ ಕಛೇರಿಗೆ ನೀಡಲು ಈ ಮೂಲಕ ಕಡ್ಡಾಯವಾಗಿ ಸೂಚಿಸಲಾಗಿದೆ. ಈ ಮೂಲಕ ನಮ್ಮ ಜಿಲ್ಲೆಯನ್ನು ಬಾಲ ಕಾರ್ಮಿಕ ಮುಕ್ತ ಹಾಗೂ 100% ಶಾಲಾ ಹಾಜರಾತಿ ಮತ್ತು **"ಮಕ್ಕಳ ಸ್ನೇಹಿ"** ಶಾಲೆಗಳನ್ನಾಗಿ ಮಾಡಲು ತಾವೆಲ್ಲರೂ ಸಾಕ್ಷಿಯಾಗಿ ನಿಲ್ಲಲು ಈ ಮೂಲಕ ಕೋರಲಾಗಿದೆ.

ಚಂದ್ರಶೇಖರ್
ಉಪ ನಿರ್ದೇಶಕರು
ಸಾ.ಶಿ. ಇಲಾಖೆ, ದಾವಣಗೆರೆ ಜಿಲ್ಲೆ
ದಾವಣಗೆರೆ.

# ಆಶಯ ನುಡಿ

ಮಕ್ಕಳು ಅವರು ಅವರ ಹಕ್ಕುಗಳನ್ನು ಅನುಭವಿಸಿದಾಗ ಮಾತ್ರ ಮಕ್ಕಳು ಚೆನ್ನಾಗಿ ಕಾಣಲು, ಬದುಕಲು ಸಾಧ್ಯ, ತನ್ಮೂಲಕ ಆ ಕುಟುಂಬ ಆ ಗ್ರಾಮ, ಊರು, ಸಮಾಜ ಅಭಿವೃದ್ಧಿಯನ್ನು ಕಾಣುತ್ತದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬ ಮಕ್ಕಳು ಪೋಷಕರು, ಅಧಿಕಾರಿಗಳು, ಜನಪ್ರತಿನಿಧಿಗಳು ಮತ್ತು ಸಾರ್ವಜನಿಕರು ಅರ್ಥಮಾಡಿಕೊಳ್ಳುವುದು ಅಗತ್ಯ. ಅದಕ್ಕೆ ಈ ಕಿರು ಹೊತ್ತಿಗೆ ತುಂಬಾ ಪ್ರಯೋಜನವಾಗಲಿದೆ. ಮಕ್ಕಳ ಹಕ್ಕುಗಳನ್ನೇ ನೇರವಾಗಿ ಮಾತನಾಡುವ ಈ ಪುಸ್ತಕವನ್ನು ಯುನಿಸೆಫ್ ಯೋಜನಾ ತಂಡ ಉತ್ತಮವಾಗಿ ಹೊರತಂದಿದೆ. ಎಲ್ಲಾ ಮಕ್ಕಳು ಮಕ್ಕಳ ಹಕ್ಕುಗಳನ್ನು ಅನುಭವಿಸುವಂತಾಗಲಿ ಎಂಬುದೇ ನಮ್ಮ ಆಶಯ.

ಸಿ.ಹೆಚ್. ಹಿರೇಗೌಡರ್
ಕಾರ್ಮಿಕ ಅಧಿಕಾರಿಗಳು
ದಾವಣಗೆರೆ ಜಿಲ್ಲೆ, ದಾವಣಗೆರೆ.





ಮಕ್ಕಳೇ ..... ನಿಮ್ಮ ಹಕ್ಕುಗಳನ್ನು ನೀವು ಅರ್ಥಮಾಡಿಕೊಂಡು, ನೀವೂ ಕೂಡ ಇಂದಿನ ಪ್ರಜೆಗಳು ಎಂಬುದನ್ನು ಅರಿತು ಇನ್ನೊಬ್ಬರಿಗೆ ತಿಳಿಸಿ, ಅದಕ್ಕಾಗಿ ಈ ಪುಸ್ತಕ ನಿಮ್ಮ ಕೈಗೆ ಕೊಡುತ್ತಿದ್ದೇವೆ. ನೀವೂ ಕೂಡ ಸ್ವಾಭಿಮಾನದಿಂದ ಸ್ವತಂತ್ರವಾಗಿ ಬದುಕಲು ಎಲ್ಲಾ ಅವಕಾಶವನ್ನು ನಮ್ಮ ಸಂವಿಧಾನದಲ್ಲಿ ಹಾಗೂ ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿ ನೀಡಿದೆ.

ಶಿಕ್ಷಕರೇ... ಪೋಷಕರೇ ... ಸಾರ್ವಜನಿಕರೇ ... ಓದುಗರೇ .... ಇದರಲ್ಲಿರುವ ಅಂಶಗಳನ್ನು ಓದಿ ಅರ್ಥಮಾಡಿಕೊಂಡು ಇನ್ನೊಬ್ಬರಿಗೆ ಕೊಡಿ. ಒಟ್ಟಾರೆ ಮಕ್ಕಳಿಗೆ ಮಕ್ಕಳಾಗಿ ಬದುಕಲು ಬಿಡಿ. ಅವರ ಬಾಲ್ಯ ಶಿಕ್ಷಣ ಮತ್ತು ರಕ್ಷಣೆಯನ್ನು ಕೊಡಿ. ಅದೇ ಈ ಪುಸ್ತಕದ ಗುರಿ.

ಈ ಪುಸ್ತಕ ಹೊರತರಲು ಸಹಕರಿಸಿದ ಪ್ರತಿಯೊಬ್ಬರಿಗೂ ಗೌರವದ ಅಭಿನಂದನೆ.

ನಿರ್ದೇಶಕರು :
ಬೆಳಕು, ಗುರಿ,
ಸೀಡ್ಸ್,
ಸೇಂಟ್‌ಜಾನ್ಸ್,
ಡಾನ್‌ಬಾಸ್ಕೋ ಮತ್ತು
ದಲಿತ ಮಹಾ ಸಭಾ ಸಂಸ್ಥೆಗಳು

ಕೆ. ರಾಘವೇಂದ್ರ ಭಟ್
ಹೆಚ್.ಕೆ. ಬಸವರಾಜ್
ಈ. ಧನಂಜಯ
ಈ. ಎನ್. ಪ್ರಸನ್ನ ಮತ್ತು
ಯುನಿಸೆಫ್, ಬಾಲಕಾರ್ಮಿಕ ಪದ್ಧತಿ ನಿರ್ಮೂಲನಾ
ವಿಶೇಷ ಕ್ರಿಯಾಯೋಜನಾ ತಂಡ, ದಾವಣಗೆರೆ.

XI

## ಮಕ್ಕಳ ಹಕ್ಕುಗಳು

ಭಾರತ ಸಂವಿಧಾನದ ಪ್ರಕಾರ;

ಪ್ರೀತಿ, ವಾತ್ಸಲ್ಯ, ಬಾಲ್ಯ, ವಿಶ್ವಾಸ,
ರಕ್ಷಣೆ, ಪೋಷಣೆ, ಆರೋಗ್ಯ,
ಆಟಪಾಠ, ಭಾಗವಹಿಸುವುದು,
ಅಭಿಪ್ರಾಯ, ಮೆಚ್ಚುಗೆ, ಪೌಷ್ಠಿಕ ಆಹಾರ,
ವಸತಿ, ಶಿಕ್ಷಣ, ಮನರಂಜನೆ,
ಅವಕಾಶ, ಸಂತೋಷ, ಸ್ನೇಹ ಇತ್ಯಾದಿ.

XII

## ಮಕ್ಕಳ ಹಕ್ಕುಗಳ ಒಡಂಬಡಿಕೆ

ಮಕ್ಕಳಿಗೆ ಅವರದ್ದೇ ಆದ ಹಕ್ಕುಗಳನ್ನು ನೀಡಬೇಕು ಎಂದು ವಿಶ್ವಸಂಸ್ಥೆ ಸಮಾವೇಶ ನಡೆಸಿ 61 ರಾಷ್ಟ್ರಗಳ ಮುಂದೆ 1989ರ ನವೆಂಬರ್ 20 ರಂದು ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ಜಾರಿಗೆ ತಂದಿದೆ. ಅದಕ್ಕೆ ಭಾರತ ಸರ್ಕಾರ 1992 ಡಿಸೆಂಬರ್ 11 ರಂದು ಸಹಿ ಮಾಡಿದೆ. ಈಗ ಈ ಒಡಂಬಡಿಕೆಗೆ 196 ರಾಷ್ಟ್ರಗಳು ಸಹಿ ಮಾಡಿವೆ. ವಿಶ್ವ ಸಂಸ್ಥೆಯ ಒಡಂಬಡಿಕೆಗಳಲ್ಲಿ ಹಾಗೂ ಪ್ರಪಂಚದಲ್ಲಿಯೇ ಅತ್ಯಂತ ದೊಡ್ಡ ಒಡಂಬಡಿಕೆ ಇದಾಗಿದೆ. ಇದರಲ್ಲಿ 54 ಪರಿಚ್ಛೇದಗಳು (ಅಂಶಗಳು ಅಥವಾ ಹಕ್ಕುಗಳು) ಇವೆ. ಈಗ 175 ರಾಷ್ಟ್ರಗಳು ಈ ಒಡಂಬಡಿಕೆಗೆ ಸಹಿ ಮಾಡಿವೆ.

ಅತ್ಯಂತ ಹೆಚ್ಚಿನ ರಾಷ್ಟ್ರಗಳು ಸಹಿ ಮಾಡಿರುವ ಏಕೈಕ ಒಡಂಬಡಿಕೆ ಇದಾಗಿದ್ದು ಇದರಲ್ಲಿ ಮುಖ್ಯವಾಗಿ ನಾಲ್ಕು ಅಂಶಗಳು ಅತ್ಯಂತ ಪ್ರಮುಖವಾದವುಗಳಾಗಿವೆ.

XIII



ಬದುಕುವ ಹಕ್ಕು.

XIV



ರಕ್ಷಣೆಯ ಹಕ್ಕು.

XV



ಅವಕಾಶ ಮತ್ತು


ವಿಕಾಸ ಹೊಂದುವ ಹಕ್ಕು.

XVI




ಭಾಗವಹಿಸುವ ಹಕ್ಕು.

XVII




## ಮಕ್ಕಳ ಹಕ್ಕುಗಳ ಒಡಂಬಡಿಕೆಯ 54 ಪರಿಚ್ಛೇದಗಳ ವಿಚಾರಗಳು ಯಾವುವು ಎಂದು ನೋಡೋಣ ...

(ಇವೆಲ್ಲವನ್ನು ಪ್ರತಿಯೊಂದು ಮಗು ಅನುಭವಿಸಬೇಕು. ಅವೆಲ್ಲವೂ ಅವರ ಮೂಲಭೂತ ಹಕ್ಕು, ಮತ್ತು ನಾವು ಅವರಿಗೆ ನೀಡಬೇಕಾದ್ದು.)



18 ವರ್ಷದೊಳಗಿನ
ಎಲ್ಲಾ ಮನುಷ್ಯ ಜೀವಿಗಳು
ಮಗು ಅಥವಾ ಮಕ್ಕಳು.





ಮಕ್ಕಳಲ್ಲಿ ಯಾವುದೇ
ತಾರತಮ್ಯ ತರಬಾರದು.

ಪು
ಟ

3
ನೇ

ಪ
ರಿ
ಚ್ಛೇ
ದ



ಮಕ್ಕಳ ಹಿತಾಸಕ್ತಿ
ಕಾಪಾಡಬೇಕು.

ಪು
ಟ

4
ನೇ

ಪ
ರಿ
ಚ್ಛೇ
ದ




ಮಕ್ಕಳ ಹಕ್ಕುಗಳನ್ನು
ಸರ್ಕಾರ ಪ್ರಾಮಾಣಿಕವಾಗಿ
ಜಾರಿಗೆ ತರಬೇಕು.



ಮಕ್ಕಳ ಶ್ರೇಯೋಭಿವೃದ್ಧಿಗೆ
ಸಹಕರಿಸುವ ಪೋಷಕರಿಗೆ
ಸರ್ಕಾರದ ಮನ್ನಣೆ.





ಜೀವಿಸುವ ಹಕ್ಕು.

ಪುಟ



7ನೇ

ಪರಿಚ್ಛೇದ

ಹೆಸರು ಮತ್ತು ರಾಷ್ಟ್ರೀಯತೆಯನ್ನು ಪಡೆಯುವ ಹಕ್ಕು.

ಪುಟ



೮ನೇ

ಪರಿಚ್ಛೇದ

ಮಕ್ಕಳ ಅನನ್ಯತೆಯನ್ನು ಕಾಪಾಡುವುದು.
(ಹೆಸರು, ಜಾತಿ, ವರ್ಗ, ಪರಿಸ್ಥಿತಿ, ಕೌಟುಂಬಿಕ ಸಂಬಂಧ ಉಳಿಸಿಕೊಳ್ಳುವುದು.)

ಪು
ಟ



೯
ನೇ

ಪ
ರಿ
ಚ್ಛೇ
ಧ

ಪೋಷಕರಿಂದ
ರಕ್ಷಣೆಯ ಹಕ್ಕು.

ಪು
ಟ



10
ನೇ

ಪ
ರಿ
ಚ್ಛೇ
ಧ

ಪೋಷಕರೊಂದಿಗಿರುವ ಹಕ್ಕು.





ಸ್ಥಳಾಂತರದಿಂದ ರಕ್ಷಣೆ
ಪಡೆಯುವ ಹಕ್ಕು.(ಯಾವುದೇ
ಮಗುವನ್ನು ಪೋಷಕರ,
ಸರ್ಕಾರದ ಹಾಗೂ ಮಗುವಿನ
ಅನುಮತಿ ಇಲ್ಲದೆ ಸ್ಥಳಾಂತರ
ಮಾಡುವ ಹಾಗಿಲ್ಲ.)









ಅಭಿಪ್ರಾಯ
ವ್ಯಕ್ತ ಪಡಿಸುವ  ಹಕ್ಕು.

ಪುಟ

13 ನೇ

ಪರಿಚ್ಛೇಧ



ಮಾಹಿತಿ
ಪಡೆಯುವ ಹಕ್ಕು.

ಪುಟ

14 ನೇ

ಪರಿಚ್ಛೇಧ



ಆತ್ಮಸಾಕ್ಷಿ ಮತ್ತು
ಧರ್ಮದ ಅನುಸರಣೆ,
ಧಾರ್ಮಿಕ ಹಕ್ಕು.

ಪುಟ

15 ನೇ

ಪರಿಚ್ಛೇದ




ಸಂಘಟಿತರಾಗುವ ಹಕ್ಕು.

ಪುಟ

16 ನೇ

ಪರಿಚ್ಛೇದ



ವೈಯಕ್ತಿಕ
ರಕ್ಷಣೆಯ ಹಕ್ಕು.

ಪುಟ



17 ನೇ ಪರಿಚ್ಛೇಧ

ದೇಶ ಮತ್ತು ಅಂತರಾಷ್ಟ್ರೀಯ
ಮಟ್ಟದ ಮಾಹಿತಿ ಪಡೆಯುವ ಹಕ್ಕು.

ಪುಟ



18 ನೇ ಪರಿಚ್ಛೇಧ

ಹೆತ್ತವರ / ಪೋಷಕರ ಪೋಷಣೆ,
ಲಾಲನೆ ಪಡೆಯುವ ಹಕ್ಕು.

ಪು
ಟ

19
ನೇ



ಪ
ರಿ
ಚ್ಛೇ
ದ

ದುರುಪಯೋಗದಿಂದ
ರಕ್ಷಣೆಯ ಹಕ್ಕು.


ಪು
ಟ

20
ನೇ



ಪ
ರಿ
ಚ್ಛೇ
ದ

ಕುಟುಂಬ ವಾತಾವರಣದಿಂದ
ವಂಚಿತ ಮಕ್ಕಳಿಗೆ ಪರ್ಯಾಯ
ವ್ಯವಸ್ಥೆ ಪಡೆಯುವ ಹಕ್ಕು.



ದತ್ತು ನೀಡುವಾಗ
ಅನ್ಯಾಯವಾಗದ ಹಾಗೆ
ರಕ್ಷಿಸುವ ಹಕ್ಕು.





ನಿರಾಶ್ರಿತ,
ನಿರ್ವಸಿತರಾಗುವುದರಿಂದ
ರಕ್ಷಣೆಯ ಹಕ್ಕು.



ಅಂಗವಿಕಲ ಮಕ್ಕಳಿಗೆ
ರಕ್ಷಣೆಯ ಹಕ್ಕು.





ಉತ್ತಮ ಆರೋಗ್ಯ
ಹೊಂದುವ ಹಕ್ಕು.





ಎಲ್ಲಾ ಮಕ್ಕಳ ಪಾಲನೆ
ಕೇಂದ್ರಗಳಲ್ಲಿ ನಿಯಮಿತ
ಅವಧಿಗಳಲ್ಲಿ ಪುನರ್ವಿಮರ್ಶೆ
ಮಾಡಿ ಮಗುವನ್ನು
ರಕ್ಷಿಸುವ ಹಕ್ಕು.









ಸಾಮಾಜಿಕ ಭದ್ರತೆಯನ್ನು
ಪಡೆಯುವ ಹಕ್ಕು.

ಪುಟ

27ನೇ

ಪರಿಚ್ಛೇಧ



ಸೂಕ್ತ ಜೀವನ ಮಟ್ಟ
ಪಡೆಯುವ ಹಕ್ಕು.

ಪುಟ

28ನೇ

ಪರಿಚ್ಛೇಧ




ಶಿಕ್ಷಣದ ಹಕ್ಕು.

ಪುಟ

29ನೇ

ಪರಿಚ್ಛೇಧ



ಮಕ್ಕಳು ಸ್ವಾವಲಂಬಿಯಾಗಿ
ಬದುಕಲು
ಪೂರಕವಾಗಿರುವಂತಹ
ಶಿಕ್ಷಣದ ಹಕ್ಕು.

ಪುಟ

30ನೇ

ಪರಿಚ್ಛೇಧ



ಅಲ್ಪಸಂಖ್ಯಾತ
ಸಮುದಾಯಗಳಿಗೆ ಅವರ
ಸಂಸ್ಕೃತಿಯಲ್ಲಿ ಜೀವಿಸುವ ಹಕ್ಕು.

ಪುಟ 31ನೇ ಪರಿಚ್ಛೇಧ



ಭಾಗವಹಿಸುವ ಹಕ್ಕು.

ಪುಟ 32ನೇ ಪರಿಚ್ಛೇಧ



ಬಾಲಕಾರ್ಮಿಕ ಪದ್ಧತಿಯಿಂದ
ರಕ್ಷಣೆಯ ಹಕ್ಕು.
(ಬಾಲಕಾರ್ಮಿಕತೆ ನಿಷೇಧ)

ಪು
ಟ



33
ನೇ

ಪ
ರಿ
ಚ್ಛೇ
ಧ

ಮಾದಕ ದ್ರವ್ಯಗಳಿಂದ
ರಕ್ಷಣೆಯ ಹಕ್ಕು.

ಪು
ಟ



34
ನೇ

ಪ
ರಿ
ಚ್ಛೇ
ಧ

ಲೈಂಗಿಕ ಶೋಷಣೆಯಿಂದ
ರಕ್ಷಣೆಯ ಹಕ್ಕು.

ಪು
ಟ



35
ನೇ

ಮಕ್ಕಳ ಮಾರಾಟ ಮಾಡುವ
ಮತ್ತು ಅಕ್ರಮ
ಬಂಧನದಲ್ಲಿಡುವುದರ
ವಿರುದ್ಧ ರಕ್ಷಣೆಯ ಹಕ್ಕು.

ಪ
ರಿ
ಚ್ಛೇ
ಧ

ಪು
ಟ



36
ನೇ

ಇನ್ನಿತರ ಶೋಷಣೆಗಳ
ವಿರುದ್ಧ ರಕ್ಷಣೆಯ ಹಕ್ಕು.

ಪ
ರಿ
ಚ್ಛೇ
ಧ

ಪು
ಟ




37
ನೇ

ಚಿತ್ರಹಿಂಸೆ ಮತ್ತು
ಮರಣದಂಡನೆಯಿಂದ
ರಕ್ಷಣೆಯ ಹಕ್ಕು.

ಪ
ರಿ
ಚ್ಛೇ
ಧ


ಪು
ಟ



38
ನೇ


ಯುದ್ಧ / ಸಶಸ್ತ್ರ ಸಂಘರ್ಷದಿಂದ
ರಕ್ಷಣೆಯ ಹಕ್ಕು.

ಪ
ರಿ
ಚ್ಛೇ
ಧ



ಯಾವುದೇ ರೀತಿ
ವಂಚಿತರಾಗಿದ್ದರೆ, ತಕ್ಷಣ
ಪುನರ್ವಸತಿ ವ್ಯವಸ್ಥೆ.





ಪರಿಸ್ಥಿತಿಗನುಗುಣವಾಗಿ
ಸಮಸ್ಯೆಗೊಳಗಾಗಿದ್ದರೆ ಮಕ್ಕಳಿಗೆ
ನ್ಯಾಯ ದೊರಕಿಸಿಕೊಡುವ ಹಕ್ಕು.

ಪು ಟ

41 ನೇ

ಪ ರಿ ಚ್ಛೇ ಧ



ಮಕ್ಕಳ ಪರವಾದ ಕಾನೂನನ್ನು ಎತ್ತಿಹಿಡಿಯುವ ಹಕ್ಕು.

ಪು ಟ

42 ನೇ

ಪ ರಿ ಚ್ಛೇ ಧ





ಸರಕಾರ ಮಕ್ಕಳ ಹಕ್ಕುಗಳ ಬಗ್ಗೆ ವ್ಯಾಪಕ ಪ್ರಚಾರ ಮಾಡಬೇಕು.




ಮಕ್ಕಳ ಹಕ್ಕುಗಳ ಬಗ್ಗೆ ಒಪ್ಪಿ
ಸಮಿತಿ ರಚಿಸಿ ಪ್ರಗತಿಪಡಿಸಬೇಕು.







ಮಕ್ಕಳ ಹಕ್ಕುಗಳ ಜಾರಿ ಕುರಿತ
ವರದಿಯನ್ನು ವಿಮರ್ಶೆ ಮಾಡಿ
ವಿಶ್ವಸಂಸ್ಥೆಗೆ ಒಪ್ಪಿಸುವುದು.





ಪರ್ಯಾಯ ವರದಿಗಳನ್ನು ಇತರ ಸಂಘಸಂಸ್ಥೆಗಳ ಸಹಕಾರದಿಂದ ಸಲಹೆ ಪಡೆದು ವಿಶ್ವಸಂಸ್ಥೆಗೆ ಕಳುಹಿಸುವುದು.






ಮಕ್ಕಳ ಹಕ್ಕುಗಳ ಈ ಅಂತರಾಷ್ಟ್ರೀಯ ಒಡಂಬಡಿಕೆಗೆ ಸಹಿ ಹಾಕಲು ಎಲ್ಲಾ ದೇಶಗಳಿಗೆ ಅವಕಾಶವಿದೆ.



47 ನೇ ಪರಿಚ್ಛೇದ


ಒಡಂಬಡಿಕೆಯನ್ನು ಒಪ್ಪಿದ
ಮೇಲೆ ಆ ಪ್ರತಿಯು ವಿಶ್ವಸಂಸ್ಥೆಯ
ಪ್ರಧಾನ ಕಾರ್ಯದರ್ಶಿಗಳ ಬಳಿ
ಇಡಲ್ಪಡುತ್ತದೆ.





48 ನೇ ಪರಿಚ್ಛೇದ

ಎಲ್ಲಾ ರಾಷ್ಟ್ರಗಳಿಗೆ ಈ
ಒಡಂಬಡಿಕೆಯನ್ನು ತಿಳಿದು
ಒಪ್ಪಲು ಸ್ವಾತಂತ್ರ್ಯವಿದೆ.




ಯಾವುದೇ ರಾಷ್ಟ್ರವು
ಈ ಒಡಂಬಡಿಕೆಯನ್ನು ಒಪ್ಪಿ ಸಹಿ
ಮಾಡಿ ವಿಶ್ವಸಂಸ್ಥೆ ಪ್ರಧಾನ
ಕಾರ್ಯದರ್ಶಿಯವರಿಗೆ ನೀಡಿದ
30 ದಿನಗಳ ನಂತರ ಅದು
ಜಾರಿಗೆ ಬರುತ್ತದೆ.





ಈ ಒಡಂಬಡಿಕೆಗೆ ಸೂಕ್ತ
ತಿದ್ದುಪಡಿ ಸೂಚಿಸಲು ಎಲ್ಲಾ
ಸದಸ್ಯ ರಾಷ್ಟ್ರಗಳಿಗೆ ಅವಕಾಶವಿದೆ.

ಪು
ಟ




51
ನೇ

ಈ ಒಡಂಬಡಿಕೆಗೆ ತಕರಾರು
ಇದ್ದಲ್ಲಿ, ಒಪ್ಪಿಗೆಯಾಗದಿದ್ದಲ್ಲಿ
ವಿಶ್ವಸಂಸ್ಥೆಗೆ ತಿಳಿಸಬೇಕು.

ಪ
ರಿ
ಚ್ಛೇ
ಧ

ಪು
ಟ



52
ನೇ


ಯಾವುದಾದರೂ ರಾಷ್ಟ್ರ
ಸದಸ್ಯತ್ವದಿಂದ ರಾಜೀನಾಮೆ
ನೀಡುವುದಿದ್ದರೆ ಪ್ರಧಾನ
ಕಾರ್ಯದರ್ಶಿಗಳಿಗೆ ತಿಳಿಸಬೇಕು.

ಪ
ರಿ
ಚ್ಛೇ
ಧ




ಒಡಂಬಡಿಕೆಯ ಮುಖ್ಯಪ್ರತಿ
ವಿಶ್ವಸಂಸ್ಥೆ ಪ್ರಧಾನ
ಕಾರ್ಯದರ್ಶಿಗಳ ಬಳಿ ಇರುತ್ತದೆ.
ಅವರೇ ಇದರ ಮೇಲ್ವಿಚಾರಕರು.






ಒಡಂಬಡಿಕೆಯ ಭಾಷಾ ಪ್ರತಿಗಳಾದ
ಅರೇಬಿಕ್, ಚೈನೀಸ್, ಇಂಗ್ಲಿಷ್,
ಫ್ರೆಂಚ್, ರಷ್ಯನ್ ಮತ್ತು ಸ್ಪ್ಯಾನೀಷ್
ಭಾಷೆಯ ಪ್ರತಿಗಳನ್ನು
ಮೂಲಪ್ರತಿಗಳೆಂದೇ ಪರಿಗಣಿಸಿ
ವಿಶ್ವಸಂಸ್ಥೆಯ ಪ್ರಧಾನ
ಕಾರ್ಯದರ್ಶಿಗಳ ಬಳಿ
ಇಡಲಾಗುವುದು.

## ಬಾಲ ಕಾರ್ಮಿಕರೆಂದರೆ ಯಾರು ?

14 ವರ್ಷದೊಳಗಿನ ಯಾವ ಮಗು ಶಾಲೆಯಲ್ಲಿ ಇಲ್ಲವೋ ಅವರೆಲ್ಲರೂ ಬಾಲಕಾರ್ಮಿಕರು.

14 ವರ್ಷದೊಳಗಿನ ಮಕ್ಕಳು ಶಾಲೆಯಿಂದ ಹೊರಗಿದ್ದು ತನ್ನ ಬೌದ್ಧಿಕ, ಮಾನಸಿಕ, ಶಾರೀರಿಕ, ಸಾಮಾಜಿಕ ಮತ್ತು ಭಾಷಾ ಬೆಳವಣಿಗೆಗೆ ತೊಡಕಾಗುವ ಯಾವುದೇ ಚಟುವಟಿಕೆಯಲ್ಲಿದ್ದು ತನ್ನ ಮೂಲಭೂತ ಹಕ್ಕುಗಳಿಂದ ವಂಚಿತರಾಗಿದ್ದರೆ ಅವರೆಲ್ಲರೂ ಬಾಲ ಕಾರ್ಮಿಕರು ಎಂದೆನಿಸಿ ಕೊಳ್ಳುತ್ತಾರೆ. ಮಕ್ಕಳು ಇಂದು ಮಂಡಕ್ಕಿ ಭಟ್ಟಿ, ಹೊಲ, ಗದ್ದೆ, ಕೂಲಿ, ಜೀತ, ಗ್ಯಾರೇಜ್, ಹೋಟೆಲ್, ಬೀಡಿ, ಅಗರಬತ್ತಿ, ಕಟ್ಟಡ, ಇಟ್ಟಿಗೆ, ಕಾರ್ಖಾನೆ, ಫಾರ್ಮ್‌ಗಳು, ಬಾರ್‌ಗಳು ಹೀಗೆ ಹಲವಾರು ಕ್ಷೇತ್ರಗಳಲ್ಲಿ ದುಡಿಯುತ್ತಿದ್ದಾರೆ. ಇವೆಲ್ಲವೂ ಶಿಕ್ಷಾರ್ಹ ಅಪರಾಧ.

* ಶಿಕ್ಷಣಕ್ಕೆ ಮಾತ್ರ ಬಡತನವೇ.....
* ಸರಾಯಿ, ಬೀಡಿ, ಇಸ್ಪೀಟ್, ಎಲೆ-ಅಡಿಕೆ, ಕಡ್ಡಿ ಪುಡಿ, ಗುಟುಕ, ಪೂಜೆ, ಹಬ್ಬ ಇವ್ಯಾವುದಕ್ಕೂ ಬಡತನ ಇಲ್ಲವೇ.....





## ಮಕ್ಕಳಿಂದ ಯಾಕೆ ದುಡಿಸುತ್ತಾರೆ ?

ಕಡಿಮೆ ಕೂಲಿ, ಹೆಚ್ಚು ಲಾಭ, ಪ್ರಾಮಾಣಿಕ ಕೆಲಸ, ಹೆಚ್ಚು ಸಮಯ ಕೆಲಸ ಹಾಗೂ ಮಕ್ಕಳು ಪ್ರಶ್ನಿಸುವುದಿಲ್ಲ. ಮುಷ್ಕರ ಹೂಡುವುದಿಲ್ಲ, ಘೇರಾವ್ ಹೂಡುವುದಿಲ್ಲ. ಸಂಘಟನೆ ಇಲ್ಲ, ಬೋನಸ್ ಕೇಳುವುದಿಲ್ಲ, ಹೇಳಿದಂತೆ ದುಡಿಯುತ್ತಾರೆ ಇದರಿಂದ ಮಾಲೀಕರು ಹೆಚ್ಚು ಲಾಭ ಗಳಿಸುವ ಉದ್ದೇಶ, ಅದಕ್ಕೆ ಮಕ್ಕಳೇ ಬೇಕು.

ಪು
ಟ

## ಬಾಲ ಕಾರ್ಮಿಕ ಪದ್ಧತಿಗೆ ಕಾರಣಗಳೇನು ?

ನೇರ ಉತ್ತರ, ಬಡತನ, ಅನಕ್ಷರತೆ, ನಿರುದ್ಯೋಗ, ಜನಸಂಖ್ಯೆ ಆದರೆ ಇವುಗಳು ಯಾವುದೂ ನೇರವಾಗಿ ಬಾಲ ಕಾರ್ಮಿಕ ಪದ್ಧತಿಗೆ ಕಾರಣವಾಗಿಲ್ಲ. ಬದಲಾಗಿ ಬಾಲ ಕಾರ್ಮಿಕ ಪದ್ಧತಿಯೇ ಈ ಎಲ್ಲಾ ಸಮಸ್ಯೆಗಳಿಗೆ ಕಾರಣವಾಗುತ್ತಿದೆ.

ಮಕ್ಕಳನ್ನು ದುಡಿಸುವುದರಿಂದ ಯಾವ ಬಡ ಕುಟುಂಬವೂ ಉದ್ಧಾರವಾಗಿಲ್ಲ. ಬದಲಾಗಿ ಮತ್ತೆ ಬಡತನಕ್ಕೆ ಬಂದಿದೆ.

ನಿಜವಾಗಿ ಬಾಲ ಕಾರ್ಮಿಕ ಪದ್ಧತಿಗೆ ವಲಸೆ, ಪೋಷಕರ ಉದಾಸೀನ, ಸಾರ್ವಜನಿಕರ ಜಡತ್ವ, ಸುವ್ಯವಸ್ಥಿತ ಶಿಕ್ಷಣಕ್ಕೆ ಅಸಹಕಾರ, ಸಾಮಾಜಿಕ ನಿರಾಸಕ್ತಿ, ಕನಿಷ್ಠಕೂಲಿ ವೇತನ ಜಾರಿಯಲ್ಲಿ ಇಲ್ಲದೇ ಇರುವುದು, ದೊಡ್ಡವರಿಗೆ ಉದ್ಯೋಗ ಮತ್ತು ಕೂಲಿ ಕೆಲಸ ಸಿಗದೇ ಇರುವುದು, ಖಾಸಗೀಕರಣ, ಆರ್ಥಿಕ ನೀತಿ, ಕೈಗಾರಿಕೀಕರಣ, ಜಾಗತೀಕರಣ ಮತ್ತು ಕಾನೂನುಗಳು ಸಮರ್ಪಕವಾಗಿ ಜಾರಿಗೆ ಬರದೇ ಇರುವುದು ಕಾರಣವಾಗಿದೆ.



ಪು
ಟ

## ಮಹಿಳೆಯರು, ಮಹಿಳಾ ಸಂಘ ಮತ್ತು ಸ್ವ-ಸಹಾಯ ಸಂಘದ ಪಾತ್ರ

★ ತಮ್ಮ ಮನೆಯಲ್ಲಿ ಎಲ್ಲಾ ಮಕ್ಕಳು ಶಾಲೆಗೆ ಹೋಗುವಂತೆ ಮಾಡುವುದು.

★ ತಮ್ಮ ಮಕ್ಕಳನ್ನು ಯಾವುದೇ ಕಾರಣಕ್ಕೂ ಸಂಬಳ, ಜೀತ, ಹೊಲ, ಗದ್ದೆ, ಎಮ್ಮೆ ಹಾಗೂ ಇತರೆ ಕೆಲಸಕ್ಕೆ ಕಳುಹಿಸಬಾರದು.

★ ತಮ್ಮ ಸಂಘದ ಎಲ್ಲಾ ಸದಸ್ಯರ ಮಕ್ಕಳು ಶಾಲೆಗೆ ಹೋಗುವಂತೆ ಮಾಡುವುದು.

★ ಒಂದು ವೇಳೆ ಕಳುಹಿಸದಿದ್ದಲ್ಲಿ ಸಂಘದ ಸದಸ್ಯತ್ವ ರದ್ದು ಪಡಿಸುವಂತೆ ನಡವಳಿಕೆ ಮಾಡಿ ಬಾಲ ಕಾರ್ಮಿಕ ಪದ್ಧತಿಯನ್ನು ವಿರೋಧಿಸುವುದು.

## ನಿಮಗೆ ತಿಳಿದಿರಲಿ

1. 1986 ರ ಬಾಲ ಕಾರ್ಮಿಕ ಪದ್ಧತಿ ನಿಷೇಧ ಮತ್ತು ನಿಯಂತ್ರಣ ಕಾಯಿದೆ ಪ್ರಕಾರ ಅಪಾಯಕಾರಿ ಕ್ಷೇತ್ರದಲ್ಲಿ ಮಕ್ಕಳ ದುಡಿಮೆ ನಿಷೇಧ. ಒಂದು ವೇಳೆ ದುಡಿಸಿದಲ್ಲಿ ಮಾಲೀಕರಿಗೆ 10 ಸಾವಿರ ದಂಡ ಮತ್ತು ಮೂರು ವರ್ಷ ಜೈಲು. (ಮನೆ ಕೆಲಸ ಸೇರಿದಂತೆ.)
2. 1996 ರ ಸುಪ್ರೀಂಕೋರ್ಟ್ ತೀರ್ಪು ಪ್ರಕಾರ 14 ವರ್ಷದೊಳಗಿನ ಮಕ್ಕಳನ್ನು ಅಪಾಯಕಾರಿ ಕ್ಷೇತ್ರದಲ್ಲಿ ದುಡಿಸುವುದು ನಿಷೇಧ. ಒಂದು ವೇಳೆ ದುಡಿಸಿದಲ್ಲಿ ಮಾಲೀಕರು 20 ಸಾವಿರ ದಂಡ ತೆರಬೇಕು. ಹಾಗೂ ಸರಕಾರ ರೂ. 5000/- ದಂಡ ನೀಡಿ, ರೂ. 25000/- ವನ್ನು ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಠೇವಣಿ ಇಟ್ಟು ಅದರ ಬಡ್ಡಿದರದಲ್ಲಿ ಮಗುವಿಗೆ ಶಿಕ್ಷಣ ನೀಡತಕ್ಕದ್ದು.
3. 1997 ರ ಕರ್ನಾಟಕ ಹೈಕೋರ್ಟ್ ತೀರ್ಪು ಪ್ರಕಾರ 12 ವರ್ಷದೊಳಗಿನ ಯಾವುದೇ ಮಕ್ಕಳನ್ನು, ಯಾವುದೇ ಕಾರಣಕ್ಕೂ, ಯಾವುದೇ ಕ್ಷೇತ್ರದಲ್ಲಿ ದುಡಿಸುವುದನ್ನು ನಿಷೇಧಿಸಲಾಗಿದೆ.



4. 1961 ರ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ ಪ್ರಕಾರ ಅಂಗಡಿ ಮತ್ತು ವಾಣಿಜ್ಯ ಮಳಿಗೆಗಳಲ್ಲಿ ಮಕ್ಕಳ ಕೆಲಸ ನಿಷೇಧ.
5. ಕರ್ನಾಟಕ ನಾಗರೀಕ ಸೇವಾ (ನಡವಳಿಕೆ) ಕಾಯ್ದೆ 1966 ರ ನಿಯಮ 29 ಎ :- ಸರ್ಕಾರಿ ನೌಕರರು 14 ವರ್ಷದೊಳಗಿನ ಮಕ್ಕಳನ್ನು ಮನೆಕೆಲಸಕ್ಕೆ ನೇಮಿಸುವುದು ಶಿಕ್ಷಾರ್ಹ ಅಪರಾಧ.
6. 2000 ನೇ ಇಸವಿಯ ಮಕ್ಕಳ ನ್ಯಾಯ ( ಮಕ್ಕಳ ಪೋಷಣೆ ಮತ್ತು ರಕ್ಷಣೆ ) ಕಾಯ್ದೆ. {Juvenile Justice (Care and Protection) act : 2000} ಈ ಕಾಯ್ದೆ ಪ್ರಕಾರ 18 ವರ್ಷದೊಳಗಿನ ಮಕ್ಕಳನ್ನು ಶೋಷಣೆ, ದೌರ್ಜನ್ಯ, ಹಿಂಸೆ, ದಬ್ಬಾಳಿಕೆ, ಲೈಂಗಿಕ ಕಿರುಕುಳ, ಅವರ ಅಭಿಪ್ರಾಯಕ್ಕೆ ಧಕ್ಕೆ, ಸ್ವಾತಂತ್ರ್ಯಕ್ಕೆ ಧಕ್ಕೆ, ಒತ್ತಡ ಹೇರುವುದು, ಬಲಾತ್ಕಾರ ಮತ್ತು ಅವರ ಇಚ್ಛಾಶಕ್ತಿಯ ವಿರುದ ಒತ್ತಡ ಹೇರುವುದು ನಿಷೇಧ.

## ನಿಮಗೆ ಗೊತ್ತಿದೆಯೇ

1. ಸಂವಿಧಾನ ಲೇಖನ 21 ರ ಪ್ರಕಾರ ಎಲ್ಲರಿಗೂ ಬದುಕುವ ಹಕ್ಕು ಇದೆ.
2. ಸಂವಿಧಾನದ ಲೇಖನ 21ಎ ಪ್ರಕಾರ 6-14 ವರ್ಷದೊಳಗಿನ ಮಕ್ಕಳಿಗೆ ಶಿಕ್ಷಣ ಮೂಲಭೂತ ಹಕ್ಕು (2003 ಮಾರ್ಚ್‌ನಲ್ಲಿ ಸಂವಿಧಾನದಲ್ಲಿ ತಿದ್ದುಪಡಿಯಾದಂತೆ).
3. ಸಂವಿಧಾನ ಲೇಖನ 34 ರ ಪ್ರಕಾರ ಪೋಷಕರು ಕುಟುಂಬ ನಡೆಸಲು ಮಕ್ಕಳನ್ನು ಬಳಸಬಾರದು.
4. ಸಂವಿಧಾನ ಲೇಖನ 45ರ ಪ್ರಕಾರ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕು.
5. 1989ರ ವಿಶ್ವಸಂಸ್ಥೆಯ ಒಡಂಬಡಿಕೆಯಂತೆ, 1992 ರಲ್ಲಿ ಭಾರತ ಸರಕಾರ ಸಹಿ ಮಾಡಿದಂತೆ ಮಕ್ಕಳಿಗೆ ಬದುಕುವ ಹಕ್ಕು, ರಕ್ಷಣೆಯ ಹಕ್ಕು, ಅಭಿವೃದ್ಧಿ ಮತ್ತು ವಿಕಾಸ ಹೊಂದುವ ಹಕ್ಕು ಹಾಗೂ ಭಾಗವಹಿಸುವ ಹಕ್ಕು ಇದೆ.
6. 1976 ರ ಜೀತ ಪದ್ಧತಿ ನಿರ್ಮೂಲನ ಕಾಯಿದೆ ಪ್ರಕಾರ ಯಾವುದೇ ಮಕ್ಕಳನ್ನು, ನಾಗರೀಕರನ್ನು ಜೀತಕ್ಕೆ / ಸಂಬಳಕ್ಕೆ ಇಡುವಂತಿಲ್ಲ.



## ಬಾಲಕಾರ್ಮಿಕ ಪದತಿ ನಿರ್ಮೂಲನೆಗೆ ನೀವೇನು ಮಾಡಬಹುದು ..?

1. ಯಾವುದೇ ಮಕ್ಕಳನ್ನು ದುಡಿಸಬೇಡಿ, ದುಡಿತಕ್ಕೆ ಕಳುಹಿಸಬೇಡಿ.
2. **ಯುವಕರೇ / ಊರಿನ ಮುಖಂಡರೇ** - ನಿಮ್ಮ ಗ್ರಾಮದ ಯಾವುದೇ ಮಕ್ಕಳು ಶಿಕ್ಷಣದಿಂದ ವಂಚಿತರಾಗದಂತೆ ಜಾಗೃತಿ ಮೂಡಿಸಿ ಮತ್ತು ಯಾವುದೇ ಬೀದಿ ಮಕ್ಕಳು, ಚಿಂದಿ ಆಯುವ, ದುಡಿಯುವ ಮಕ್ಕಳು ಕಂಡು ಬಂದಲ್ಲಿ ಪುನರ್ವಸತಿಗೆ ವ್ಯವಸ್ಥೆ ಮಾಡಿ ಅಥವಾ ಕಾರ್ಮಿಕ ಇಲಾಖೆ ಹಾಗೂ ಶಿಕ್ಷಣ ಇಲಾಖೆಗೆ ಮಾಹಿತಿ ನೀಡಿ.
3. **ಪೋಷಕರೇ** - ಎಲ್ಲಾ ಮಕ್ಕಳಂತೆ ನಿಮ್ಮ ಮಕ್ಕಳು ಸ್ವಾಭಿಮಾನದಿಂದ ಶಾಲೆಯಲ್ಲಿ ಇರಲಿ - ಶಾಲೆಗೆ ಸೇರಿಸಿರಿ.
4. **ಮಾಲೀಕರೇ** - ನಿಮ್ಮ ಮಕ್ಕಳಂತೆ ಎಲ್ಲಾ ಮಕ್ಕಳು ಶಿಕ್ಷಣ ಪಡೆಯಲಿ, ಪ್ರೋತ್ಸಾಹಿಸಿ.
5. **ಜನಪ್ರತಿನಿಧಿಗಳೇ**-ಮಕ್ಕಳು Vote Bank ಅಲ್ಲವೆಂದು ನಿರ್ಲಕ್ಷಿಸಬೇಡಿ, ಅವರ ಶಿಕ್ಷಣಕ್ಕೆ ಪ್ರೋತ್ಸಾಹಿಸಿ.

6. ಮಕ್ಕಳ ದುಡಿಮೆ, ಹಿಂಸೆ, ದೌರ್ಜನ್ಯ, ಲೈಂಗಿಕ ಹಿಂಸೆಯನ್ನು ಖಂಡಿಸಿ ವಿರೋಧಿಸಿ.
7. 18 ವರ್ಷದೊಳಗಿನ ಎಲ್ಲಾ ಮಕ್ಕಳು ಶಾಲೆಯಲ್ಲಿ ಇರುವಂತೆ ಮಾಡಿ.
8. ಮಕ್ಕಳ ಹಕ್ಕು, ಕಾನೂನು, ಶಿಕ್ಷಣದ ಮಹತ್ವವನ್ನು ಪ್ರಚಾರ ಮಾಡಿ ನಿಮ್ಮ ಪರಿಸರದಲ್ಲಿರುವ ಎಲ್ಲಾ ಮಕ್ಕಳು ಶಾಲೆಯಲ್ಲಿ ಇರುವಂತೆ ಮಾಡಿ.
9. ಯಾವುದೇ ಮಗು ದುಡಿಯುವುದನ್ನು, ಬೀದಿಯಲ್ಲಿ ಇರುವುದನ್ನು ಕಂಡರೆ ಅವರ ಪುನರ್ವಸತಿಗೆ, ಬಿಡುಗಡೆಗೆ ಪ್ರಯತ್ನಿಸಿ, ಸ್ಥಳೀಯ ಇಲಾಖೆಗೆ ಮಾಹಿತಿ ನೀಡಿ, ಮಾಲೀಕರ ಮನ ಪರಿವರ್ತಿಸಿ.
10. ದುಡಿಮೆಗೆ, ತುಳಿತಕ್ಕೆ ಒಳಗಾದ ಮಕ್ಕಳನ್ನು ಕೈ ಬೀಸಿ ಕರೆದು, ಬಾಲ ಕಾರ್ಮಿಕ ಪದ್ಧತಿ ತೊಲಗಲಿ ಎಂದು ಧ್ವನಿ ಎತ್ತಿ ಕೂಗೋಣ.
11. **ಮಕ್ಕಳೇ ......** ನೀವು ಎಲ್ಲಾ ಹಕ್ಕುಗಳನ್ನು ಅನುಭವಿಸಿ, ಶಾಲೆಯಲ್ಲಿ ಕಲಿಯುತ್ತಿರಬೇಕು. ನಿಮ್ಮಂತೆ ಎಲ್ಲಾ ಮಕ್ಕಳು ಶಾಲೆಗೆ ಬರಬೇಕು. ನಿಮ್ಮ ಜೊತೆ ಶಾಲೆಯಿಂದ ಹೊರಗುಳಿದ ಒಂದು ಮಗುವನ್ನು ಶಾಲೆಗೆ ಕರೆ ತನ್ನಿ. ಮಕ್ಕಳ ದುಡಿಮೆಯನ್ನು ಎಲ್ಲಾ ಕಡೆ ಖಂಡಿಸಿ, ನೀವೂ ವಿರೋಧಿಸಿ.



## ಗ್ರಾಮ ಪಂಚಾಯಿತಿ ಪಾತ್ರ

ತಮ್ಮ ಗ್ರಾಮದಲ್ಲಿರುವ 18 ವರ್ಷದೊಳಗಿನ ಎಲ್ಲಾ ಮಕ್ಕಳು ಶಾಲೆಯಲ್ಲಿರುವಂತೆ ಮಾಡಿ ಮಕ್ಕಳ ಹಕ್ಕುಗಳನ್ನು ಅರಿತು ಬಾಲ ಕಾರ್ಮಿಕ ರಹಿತ ಪಂಚಾಯಿತಿಯನ್ನಾಗಿ ಮಾಡುವುದು.

## ಶಾಲೆಯ / ಎಸ್.ಡಿ.ಎಂ.ಸಿ. ಯ ಪಾತ್ರ

ತಮ್ಮ ಶಾಲೆಯಲ್ಲಿ ಯಾವುದೇ ಮಗು ಶಾಲೆ ಬಿಡದಂತೆ ನೋಡಿಕೊಂಡು **"ಮಕ್ಕಳ ಹಕ್ಕುಗಳ ಕ್ಲಬ್"** ನ್ನು ಶಾಲೆಗಳಲ್ಲಿ ರಚಿಸಿ, ಬಾಲ ಕಾರ್ಮಿಕ ರಹಿತ ಗ್ರಾಮ ಮತ್ತು ಮಕ್ಕಳ ಸ್ನೇಹಿ ಶಾಲೆಯನ್ನಾಗಿ ಮಾಡುವುದು.

ಗ್ರಾಮ ಪಂಚಾಯಿತಿ ಹಾಗೂ ವಾರ್ಡ್‌ಗಳು ಹೀಗಲ್ಲ ಹೀಗಿರಬೇಕು.

| ಹೀಗಲ್ಲ | ಹೀಗಿರಲಿ |
|---|---|
| ಮಕ್ಕಳನ್ನು ದುಡಿಯಲು ಕಳುಹಿಸಲಾಗುತ್ತಿದೆ. | ಮಕ್ಕಳನ್ನು ಶಾಲೆಗೆ ತಪ್ಪದೇ ಕಳುಹಿಸಲಾಗುತ್ತಿದೆ. |
| ಗಂಡು ಮಕ್ಕಳು ಮಾತ್ರ ಶಾಲೆಯಲ್ಲಿ ಕಲಿಯಲಿ. | ಗಂಡು / ಹೆಣ್ಣು ಮಕ್ಕಳೆಲ್ಲಾ ಶಾಲೆಯಲ್ಲಿ ಕಲಿಯಲಿ. |
| ಮಕ್ಕಳಿಗೆ ಮನೆಗೆಲಸದ ಹೊರೆ ಇದೆ. | ಮಕ್ಕಳಿಗೆ ಓದಲು, ಆಡಲು ಅವಕಾಶ ಕಲ್ಪಿಸಲಾಗಿದೆ. |
| ಪ್ರೋತ್ಸಾಹಕ ಯೋಜನೆಗಳು ದುರುಪಯೋಗವಾಗುತ್ತಿವೆ. | ಪ್ರೋತ್ಸಾಹಕ ಯೋಜನೆಗಳು ಸಕಾಲದಲ್ಲಿ ಮಕ್ಕಳಿಗೆ ಸಿಗುವಂತೆ ನೋಡಿಕೊಳ್ಳಲಾಗುತ್ತಿದೆ. |
| ಶಾಲಾ (ಕಟ್ಟಡ) ಆವರಣವನ್ನು ಸ್ವಂತ ಕೆಲಸಗಳಿಗೆ ಉಪಯೋಗಿಸಲಾಗುತ್ತಿದೆ. | ಶಾಲಾ ಆವರಣ ಶಾಲಾ ಚಟುವಟಿಕೆಗಳಿಗೆ ಮಾತ್ರ ಉಪಯೋಗಿಸಲಾಗುತ್ತಿದೆ. |
| ಶಿಕ್ಷಕರೇ ಲೋಪದೋಷಗಳನ್ನು ಮಾಡುತ್ತಿರುವುದು. | ತಕ್ಷಣ ಅವರ ಲೋಪದೋಷಗಳನ್ನು ಸರಿಪಡಿಸಿಕೊಂಡು ಗುಣಾತ್ಮಕ ಶಿಕ್ಷಣ ನೀಡುವಂತೆ ಮಾಡಲಾಗಿದೆ. |
| ಶಾಲಾ ಶಿಕ್ಷಕರನ್ನು ಊರಿನ ಇತರ ಕೆಲಸಗಳಿಗೆ ಬಳಸಿಕೊಳ್ಳುತ್ತಿರುವುದು. | ಮಕ್ಕಳು, ಶಿಕ್ಷಕರಿಗೆ ಶಾಲೆಯಲ್ಲಿ ಯಾವುದೇ ತೊಂದರೆ ಇಲ್ಲದ ವಾತಾವರಣ ನಿರ್ಮಾಣ ಮಾಡಲಾಗುವುದು. |
| ವೈಯಕ್ತಿಕ ನಿರ್ಣಯ ತೆಗೆದುಕೊಳ್ಳುವುದು. | ಸಭೆ ಸೇರಿ ಚರ್ಚಿಸಿ ಪಾರದರ್ಶಕತೆಯಿಂದ ತೀರ್ಮಾನ ಕೈಗೊಳ್ಳಲಾಗಿದೆ. |
| ಶಾಲೆಗೆ ಶಿಕ್ಷಕರ ಹಾಗೂ ಕೊಠಡಿಯ ಕೊರತೆ. | ಅಗತ್ಯ ಸೌಲಭ್ಯ ದೊರಕಿಸಿ ಅತ್ಯುತ್ತಮ ಶಾಲೆಯನ್ನಾಗಿ ಮಾರ್ಪಡಿಸಲಾಗಿದೆ. |
| ಶಾಲೆಯ ಹಣ ದುರುಪಯೋಗ ಆಗುತ್ತಿರುವುದು. | ಶಾಲೆಯ ಹಣ ಶಾಲಾಭಿವೃದ್ಧಿ ಕೆಲಸಗಳಿಗೆ ಮಾತ್ರ ಉಪಯೋಗಿಸಲಾಗುತ್ತಿದೆ. |

## ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಬಗ್ಗೆ ನಿಮಗೆ ತಿಳಿದಿರಲಿ

| ತಪ್ಪು ✗ | ಸರಿ ✓ |
|---|---|
| 1 ರಿಂದ 14 ವರ್ಷದೊಳಗಿನವರು ಮಾತ್ರ ಮಕ್ಕಳು. | 18 ವರ್ಷದೊಳಗಿನವರೆಲ್ಲಾ ಮಕ್ಕಳು. |
| ಬಾಲಕಾರ್ಮಿಕ ಪದ್ಧತಿ ಒಂದು 'ಕಲ್ಯಾಣ' ಕಾರ್ಯಕ್ರಮಕ್ಕೆ ಸಂಬಂಧಿಸಿದ ಸಮಸ್ಯೆ. | ಬಾಲ ಕಾರ್ಮಿಕ ಪದ್ಧತಿ ಇದೊಂದು ಅಭಿವೃದ್ಧಿಗೆ ಮಾರಕವಾದ ಸಾಮಾಜಿಕ ಸಮಸ್ಯೆ. |
| ಮಕ್ಕಳು ಚಿಕ್ಕವರು, ಅವರಿಗೆ ಯಾವ ಹಕ್ಕು ಅನ್ವಯಿಸುವುದಿಲ್ಲ. | "ಮಕ್ಕಳ ಹಕ್ಕುಗಳು" ಮಾನವ ಹಕ್ಕುಗಳು. |
| ಇಂದಿನ ಮಕ್ಕಳು ಮುಂದಿನ ಪ್ರಜೆಗಳು. | ಇಂದಿನ ಮಕ್ಕಳು ಇಂದಿನ ಪ್ರಜೆಗಳು. |
| ಕಷ್ಟ, ಬರಗಾಲ, ಕುಟುಂಬದ ಸಮಸ್ಯೆಗಾಗಿ ಮಕ್ಕಳನ್ನು ದುಡಿಸುವುದು ತಪ್ಪಲ್ಲ. | ಮಕ್ಕಳನ್ನು ದುಡಿಸುವುದು ಶಿಕ್ಷಾರ್ಹ ಅಪರಾಧ. |
| ಮಕ್ಕಳ ಸಮಸ್ಯೆ ನಮಗೆ ಮತ್ತು ಪಂಚಾಯ್ತಿಗೆ ಅನ್ವಯಿಸುವುದಿಲ್ಲ. | 18 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಅವರ ಹಕ್ಕುಗಳನ್ನು ನೀಡಿ ಗೌರವಿಸಿ, ಅನುಭವಿಸಲು ಬಿಡುವುದು ಹಾಗೂ ಬಾಲ್ಯ, ಪ್ರೀತಿ, ಶಿಕ್ಷಣ ಮತ್ತು ರಕ್ಷಣೆ ನೀಡುವುದು ಪ್ರತಿಯೊಬ್ಬ ನಾಗರೀಕನ/ಪಂಚಾಯಿತಿಯ ಕರ್ತವ್ಯ. |
| ಬಡತನ, ಅನಕ್ಷರತೆ, ನಿರುದ್ಯೋಗ ಮತ್ತು ಜನಸಂಖ್ಯೆ, ಇವು ಬಾಲಕಾರ್ಮಿಕ ಪದ್ಧತಿಗೆ ಕಾರಣವಾಗಿದೆ. | ಬಾಲ ಕಾರ್ಮಿಕ ಪದ್ಧತಿಯೇ ಬಡತನ, ಅನಕ್ಷರತೆ, ನಿರುದ್ಯೋಗ ಮತ್ತು ಜನಸಂಖ್ಯೆಗೆ ಕಾರಣವಾಗಿದೆ. |
| ಮಕ್ಕಳನ್ನು ದುಡಿಸುವುದರಿಂದ ನಮ್ಮ ಕುಟುಂಬ ನಡೆಯುತ್ತದೆ. | ಮಕ್ಕಳನ್ನು ದುಡಿಸುವುದರಿಂದಲೇ ಯಾವ ಕುಟುಂಬವು ನಡೆಯುವುದಿಲ್ಲ ಹಾಗೂ ಉದ್ಧಾರವಾಗಿಲ್ಲ. |
| ಮಕ್ಕಳನ್ನು ಕೆಲಸ, ಜೀತ, ದಿನಗೂಲಿ ಮತ್ತು ಸಂಬಳಕ್ಕೆ ಹಚ್ಚುವುದರಿಂದ ನಮ್ಮ ಕುಟುಂಬದ ಬಡತನ ಕಡಿಮೆಯಾಗಿದೆ. | ಮಕ್ಕಳನ್ನು ಕೆಲಸ, ಜೀತ, ದಿನಗೂಲಿ ಮತ್ತು ಸಂಬಳಕ್ಕೆ ಹಚ್ಚುವುದರಿಂದ ಆ ಕುಟುಂಬದ ಬಡತನ ಹೆಚ್ಚುತ್ತದೆ. |
| ನಮ್ಮ ಸ್ವಂತ ಮಕ್ಕಳನ್ನು ನಾವು ನಮ್ಮ ಇಚ್ಛೆಯಂತೆ ಕೆಲಸಕ್ಕೆ ಕಳುಹಿಸಬಹುದು ಮತ್ತು ಕೆಲಸಕ್ಕೆ ಮನೆಯಲ್ಲಿ ಇಡಬಹುದು. | ನಮ್ಮ ಸ್ವಂತ ಮಕ್ಕಳನ್ನು ಕೂಡ 14 ವರ್ಷಗಳ ತನಕ ಎಲ್ಲಿಯೂ ಹಾಗೂ ಸ್ವಂತ ಮನೆಯಲ್ಲಿಯೂ ಶಾಲೆ ಬಿಡಿಸಿ ಕೆಲಸಕ್ಕೆ ಹಚ್ಚುವಂತಿಲ್ಲ. |

ಪು
ಟ

## 1986 ರ ಬಾಲಕಾರ್ಮಿಕ ಪದ್ಧತಿ ನಿಷೇಧ ಮತ್ತು ನಿಯಂತ್ರಣ ಕಾಯ್ದೆಯ ತಿದ್ದುಪಡಿ

ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ದಿನಾಂಕ 10-10-06 ರಿಂದ ಜಾರಿಗೆ ತಂದಿರುವಂತೆ ಕೇಂದ್ರ ಶಾಸನವಾದ "ಬಾಲಕಾರ್ಮಿಕ ಪದ್ಧತಿ ನಿಷೇಧ ಮತ್ತು ನಿಯಂತ್ರಣ ಕಾಯ್ದೆಗೆ" (1986) ತಿದ್ದುಪಡಿ ತಂದು ಮಕ್ಕಳಿಗೆ **"ಮನೆಕೆಲಸ"** (ಗೃಹಕೃತ್ಯ, Domestic Servant ) ವನ್ನು ಅಪಾಯಕಾರಿ ಎಂದು ಘೋಷಿಸಿ ಕಾಯ್ದೆಯ ಮುಖ್ಯ ಭಾಗ - ಎ ಉದ್ಯೋಗಗಳ ಪಟ್ಟಿಯಡಿಯಲ್ಲಿ ತಂದಿದೆ. ಅಲ್ಲದೆ ಹೋಟೆಲ್, ಟೀ ಶಾಪ್, ಡಾಬಾ ರೆಸಾರ್ಟ್, ಮನರಂಜನಾ ಕೇಂದ್ರ, ಮಸಾಜ್ ಕೇಂದ್ರ, ಬ್ಯೂಟಿ ಪಾರ್ಲರ್‌ಗಳನ್ನು ಕೂಡಾ ಈ ಕಾಯ್ದೆಯ ಅಡಿಯಲ್ಲಿ ತಂದು ಅಪಾಯಕಾರಿ ಎಂದು ಘೋಷಣೆ ಮಾಡಿದೆ. ಒಂದು ವೇಳೆ ಈ ಮೇಲಿನ ಕ್ಷೇತ್ರದಲ್ಲಿ 14 ವರ್ಷದೊಳಗಿನ ಮಕ್ಕಳನ್ನು ದುಡಿಸಿದಲ್ಲಿ 1 ವರ್ಷ ಜೈಲು, ರೂ. 20,000 ದಂಡದ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ, ಅಲ್ಲದೆ ಇನ್ನುಳಿದ 70 ಕ್ಷೇತ್ರಗಳು ಅಪಾಯಕಾರಿ ಎಂದು 1986 ರಿಂದಲೂ ಜಾರಿಯಲ್ಲಿ ಇದೆ.



ಪು
ಟ

# ಮಕ್ಕಳ ಹಕ್ಕುಗಳ ಕ್ಲಬ್

**"ಇಂದಿನ ಮಕ್ಕಳು ಇಂದಿನ ಪ್ರಜೆಗಳೇ"**

"ಮಕ್ಕಳಿಂದ, ಮಕ್ಕಳಿಗಾಗಿ, ಮಕ್ಕಳಿಗೋಸ್ಕರ ಮಕ್ಕಳೇ ರಚಿಸಿ, ನಡೆಸುವ ಮಕ್ಕಳ ಸಮಿತಿಯೇ "ಮಕ್ಕಳ ಹಕ್ಕುಗಳ ಕ್ಲಬ್"

ಸರಕಾರಿ ಮತ್ತು ಖಾಸಗಿಯ ಎಲ್ಲಾ ಹಿರಿಯ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಗಳಲ್ಲಿ "ಮಕ್ಕಳ ಹಕ್ಕುಗಳ ಕ್ಲಬ್" ನ ರಚನೆ

## "ಶಾಲೆಗೊಂದು ಮಕ್ಕಳ ಹಕ್ಕುಗಳ ಕ್ಲಬ್"

ಗುರಿ

"ಪ್ರತಿ ಶಾಲೆಯನ್ನು ಮತ್ತು ಶಾಲಾ ಪರಿಸರವನ್ನು ಮಕ್ಕಳ ಸ್ನೇಹಿ ಶಾಲೆ ಮತ್ತು ಮಕ್ಕಳ ಸ್ನೇಹಿ ಸಮುದಾಯವನ್ನಾಗಿ ಪರಿವರ್ತಿಸುವುದು."

# ಉದ್ದೇಶಗಳು

1. ಸಂವಿಧಾನದ ಪ್ರಕಾರ ಮತ್ತು ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಸಮಾವೇಶದಂತೆ ಮಕ್ಕಳ ಎಲ್ಲಾ ಹಕ್ಕುಗಳ ಬಗ್ಗೆ ತಿಳಿಯುವುದು, ಜಾಗೃತಿ ಮೂಡಿಸುವುದು.
2. ಮಕ್ಕಳ ಹಕ್ಕುಗಳ ಬಗ್ಗೆ ಆಯಾ ಶಾಲೆಯಲ್ಲಿ ಮತ್ತು ಶಾಲಾ ವ್ಯಾಪ್ತಿಯಲ್ಲಿರುವ ಸಮುದಾಯಕ್ಕೆ ಜಾಗೃತಿ ಮೂಡಿಸುವುದು.
3. ಪ್ರತಿ ಶಾಲೆಯಲ್ಲಿ ಎಲ್ಲಾ ಶಾಲಾ ಚಟುವಟಿಕೆಗಳನ್ನು ಮಕ್ಕಳ ಹಕ್ಕುಗಳ ಆಧಾರಿತವಾಗಿ ಕಾರ್ಯಕ್ರಮಗಳನ್ನು ರೂಪಿಸುವುದು.
4. ಶಾಲಾ ಚಟುವಟಿಕೆಗಳು "ಮಕ್ಕಳ ಹಕ್ಕುಗಳ ಕ್ಲಬ್" ಮುಖಾಂತರ ತೀರ್ಮಾನ ಕೈಗೊಂಡು ಕಾರ್ಯ ಕ್ರಮಗಳನ್ನು ರೂಪಿಸುವುದು.
5. ಮಕ್ಕಳು ಶಾಲೆ ಬಿಡುವುದನ್ನು (ಕನಿಷ್ಠ 10 ನೇ ತರಗತಿ ತನಕ) ಸಂಪೂರ್ಣ ತಡೆಗಟ್ಟುವುದು.
6. ಬಾಲ ಕಾರ್ಮಿಕ ಪದ್ಧತಿಯನ್ನು ವಿರೋಧಿಸಿ, ಖಂಡಿಸಿ ಅದರ ನಿರ್ಮೂಲನೆಗೆ ಚಾಲನೆ ನೀಡುವುದು.
7 ಎಲ್ಲಾ ಮಕ್ಕಳ (0-18 ವರ್ಷ) ಸರ್ವತೋಮುಖ ಅಭಿವೃದ್ಧಿ, ಶಿಕ್ಷಣ ಮತ್ತು ಬಾಲ್ಯವನ್ನು ಕಾಪಾಡಿ ಉತ್ತಮ ನಾಗರಿಕರನ್ನಾಗಿ ರೂಪಿಸುವುದು.





# ಕ್ಲಬ್ ರಚಿಸುವ ವಿಧಾನ / ಕರ್ತವ್ಯಗಳು

1. ಪ್ರಾರಂಭದಲ್ಲಿ ಶಾಲಾ ಮತ್ತು ಸಮುದಾಯ ಮಟ್ಟದಲ್ಲಿ ಹಲವಾರು ಅರಿವಿನ ಕಾರ್ಯಕ್ರಮ ನಡೆಸಿ ಮಕ್ಕಳ, ಸಮುದಾಯದ, ಒಪ್ಪಿಗೆ ಪಡೆದು ಕ್ಲಬ್‌ನ ಅಗತ್ಯ, ಉಪಯೋಗವನ್ನು ಅರ್ಥಮಾಡಿಕೊಂಡು ಕ್ಲಬ್‌ನ ರಚನೆಗೆ ಮುಂದಾಗುವುದು.
2. ಎಲ್ಲಾ ಮಕ್ಕಳು, ಸಭೆ ಸೇರಿ ಕ್ಲಬ್ ರಚಿಸುವುದು.
3. ಸದಸ್ಯರುಗಳು :

   ಪ್ರತಿ ಶಾಲೆಯ, ಪ್ರತಿ ತರಗತಿಯಿಂದ ಒಬ್ಬ ವಿದ್ಯಾರ್ಥಿ / ವಿದ್ಯಾರ್ಥಿನಿಯ ಆಯ್ಕೆ ಒಟ್ಟು 15 ವಿದ್ಯಾರ್ಥಿಗಳು ಸದಸ್ಯರಾಗಿರುತ್ತಾರೆ. (ಇತರೆ ಆಸಕ್ತ ವಿದ್ಯಾರ್ಥಿಗಳನ್ನು ಆರಿಸಬಹುದು.) ಮೂವರು ಶಿಕ್ಷಕರು (ಮುಖ್ಯೋಪಾಧ್ಯಾಯರು ಮತ್ತು 2 ಶಿಕ್ಷಕರು) - 3 ಎಸ್‌ಡಿಎಂಸಿ ಸದಸ್ಯರು (ಅಧ್ಯಕ್ಷರು ಮತ್ತು 2 ಸದಸ್ಯರು) ಒಟ್ಟು 21 ರಿಂದ 25ರ ವರೆಗೆ ಈ ಕ್ಲಬ್‌ನಲ್ಲಿ ಸದಸ್ಯರನ್ನು ಮಕ್ಕಳ ಮುಖಾಂತರ ಆಯ್ಕೆ ಮಾಡಬೇಕು.
4. 15 ಮಕ್ಕಳ ಸದಸ್ಯರಲ್ಲಿ 4 ಮಕ್ಕಳನ್ನು ನಿರ್ದೇಶಕರನ್ನಾಗಿ ಆಯ್ಕೆ ಮಾಡಬೇಕು (ಮಕ್ಕಳೇ)
5. ಶಿಕ್ಷಕರು, ಎಸ್‌ಡಿಎಂಸಿ ಸದಸ್ಯರು, ಪೋಷಕರು ಸದಸ್ಯರಾಗಿ ಮಾತ್ರ ಇರುತ್ತಾರೆ. ಎಲ್ಲಾ ಸಭೆ ಮಕ್ಕಳೇ ನಡೆಸುತ್ತಾರೆ.

6. ನಡವಳಿಕೆ ಪುಸ್ತಕ ಮುಖ್ಯೋಪಾಧ್ಯಾಯರ ಕಛೇರಿಯಲ್ಲಿ ಇಡುವುದು.
7. ಪ್ರತಿ ಸಭೆಯ ನಡವಳಿಕೆಯನ್ನು ಮಕ್ಕಳೇ ಬರೆಯುತ್ತಾರೆ ಎಲ್ಲಾ ಸದಸ್ಯರು ಸಹಿ ಮಾಡುತ್ತಾರೆ.
8. ವರ್ಷಕ್ಕೆ 3 ಸಾಮಾನ್ಯ ಸಭೆ ನಡೆಸಬೇಕು. ಅದರಲ್ಲೂ ಎಲ್ಲಾ ಮಕ್ಕಳು, ಶಿಕ್ಷಕರು, ಪೋಷಕರು, ಎಸ್‌ಡಿಎಂಸಿ ಸದಸ್ಯರು ಭಾಗವಹಿಸುವರು. ಸಭೆಯಲ್ಲಿ ವರದಿ ಮಂಡನೆ, ಮುಂದಿನ ಯೋಜನೆ ತಯಾರಿಸತಕ್ಕದ್ದು.
9. ಕ್ಲಬ್‌ನ ಸಮಿತಿ ಸದಸ್ಯರು ಪ್ರತಿ ತಿಂಗಳು ಸಭೆ ಸೇರಿ ಪ್ರತಿ ತಿಂಗಳ ಕಾರ್ಯಕ್ರಮದ ಚರ್ಚೆ ಮತ್ತು ಮುಂದಿನ ತಿಂಗಳ ಯೋಜನೆ ತಯಾರಿಸಿ, ಕಾರ್ಯಕ್ರಮ ನಡೆಸಬೇಕು.
10. ಪ್ರತಿ ತಿಂಗಳು 'ಕ್ಲಬ್' ಮುಖಾಂತರ ಒಂದು ಕಾರ್ಯಕ್ರಮ ಹಮ್ಮಿಕೊಳ್ಳುವುದು.
11. ಶಾಲಾ ವ್ಯಾಪ್ತಿಯಲ್ಲಿ "ಶಾಲೆಗೊಂದು ಮಕ್ಕಳ ಹಕ್ಕುಗಳ ಕ್ಲಬ್" ನ ಪರಿಕಲ್ಪನೆ ಅಡಿಯಲ್ಲಿ ಪ್ರತಿ ಶಾಲೆಯಲ್ಲಿ ಮಕ್ಕಳ ಹಕ್ಕುಗಳ ಕ್ಲಬ್ ರಚಿಸುವ ವಿಚಾರವನ್ನು 22-07-05 ರಂದು ಚರ್ಚಿಸಿ, ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆ ಯಲ್ಲಿ ಕೈಗೊಂಡ ತೀರ್ಮಾನದ ಪ್ರಕಾರ ಹಾಗೂ ಮಾನ್ಯ ಜಿಲ್ಲಾಧಿಕಾರಿಗಳ ಆದೇಶದಂತೆ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ನಿರ್ದೇಶನದಂತೆ ಜಾರಿಗೆ ತರಲಾಗುತ್ತಿದೆ.





# ಮಕ್ಕಳ ಹಕ್ಕುಗಳ ಕ್ಲಬ್‌ನ ಕಾರ್ಯ ಚಟುವಟಿಕೆ

1. ಮಕ್ಕಳ ಹಕ್ಕುಗಳ ಬಗ್ಗೆ ಅರಿವಿನ ಕಾರ್ಯಕ್ರಮಗಳು, ಶಾಲಾ ಮಟ್ಟದಲ್ಲಿ ಮತ್ತು ಸಮುದಾಯ ಮಟ್ಟದಲ್ಲಿ ನಡೆಸುವುದು (ಚಲನಚಿತ್ರ, ಸಂಗೀತ ಸ್ಪರ್ಧೆಗಳು, ಸಾರ್ವಜನಿಕ ಸಭೆ, ಬೀದಿ ನಾಟಕ, ಮಕ್ಕಳ ಸಭೆ ಇತ್ಯಾದಿ) ಹಾಗೂ ನಿರಂತರವಾಗಿ ಈ ಕಾರ್ಯಕ್ರಮಗಳನ್ನು ಮುಂದುವರಿಸುವುದು.
2. ಪ್ರತಿ ತಿಂಗಳು 'ಕ್ಲಬ್ ನ ಮಾಸಿಕ ಸಭೆ. ಈ ಸಭೆಯಲ್ಲಿ ಎಲ್ಲಾ ಶಾಲಾ ಚಟುವಟಿಕೆಗಳ ಬಗ್ಗೆ ಚರ್ಚಿಸಿ ಮಕ್ಕಳ ಅಭಿಪ್ರಾಯ ಪಡೆದು ತೀರ್ಮಾನಿಸುವುದು.
3. ಎಲ್ಲಾ ಮಕ್ಕಳ, ಶಾಲೆಯ ಸಮಸ್ಯೆ ಮತ್ತು ಅಭಿವೃದ್ಧಿ ಚಟುವಟಿಕೆಗಳು ಈ ಕ್ಲಬ್ ಮುಖಾಂತರ ಚರ್ಚಿಸಿ, ತೀರ್ಮಾನಕ್ಕೈಗೊಂಡು ಕಾರ್ಯಗತಗೊಳಿಸುವುದು.
4. ಪ್ರತಿ ತಿಂಗಳು ಮಕ್ಕಳ ಹಕ್ಕುಗಳ ಕುರಿತಾಗಿ ಸಾಂಸ್ಕೃತಿಕ ಕಾರ್ಯಕ್ರಮ ಅಥವಾ ಇತರ ಸ್ಪರ್ಧೆಗಳನ್ನು ಹಮ್ಮಿಕೊಳ್ಳುವುದು.
5. ಶಾಲಾ ವಾತಾವರಣದಲ್ಲಿ, ಕಟ್ಟಡಗಳಲ್ಲಿ, ಮಕ್ಕಳ ಹಕ್ಕುಗಳ ಕುರಿತಾಗಿ ಮಕ್ಕಳಿಂದ ಗೋಡೆ ಬರಹ, ಭಿತ್ತಿ ಪತ್ರಗಳನ್ನು ತಯಾರಿಸುವುದು.
6. ಎಲ್ಲಾ ಶಾಲೆ ಮತ್ತು ಸಮುದಾಯದಲ್ಲಿ ಮಕ್ಕಳಿಗೆ ಸಂಬಂಧಿಸಿದ ಕಾರ್ಯಕ್ರಮ, ರಾಷ್ಟ್ರೀಯ ಕಾರ್ಯಕ್ರಮ ಮತ್ತು ರಾಷ್ಟ್ರೀಯ ಹಬ್ಬಗಳನ್ನು ಈ ಕ್ಲಬ್ ಮುಖಾಂತರ ಚರ್ಚಿಸಿ, ತೀರ್ಮಾನ ಕೈಗೊಂಡು ಕ್ಲಬ್ ಮುಖಾಂತರ ಆಚರಿಸುವುದು.

7. ಬಾಲ ಕಾರ್ಮಿಕ ಮುಕ್ತ ಸಮುದಾಯವನ್ನಾಗಿ ಮಾಡುವುದು.

8. ಯಾವುದೇ ಮಗು 10 ನೇ ತರಗತಿ ತನಕ ಶಾಲೆ ಬಿಡದಂತೆ ನೋಡುವುದು.

9. ಮಕ್ಕಳ ಎಲ್ಲಾ ಹಕ್ಕು ಹಿತವನ್ನು ಎಲ್ಲಾ ದೃಷ್ಟಿಯಿಂದ ಕಾಪಾಡುವುದು.

10. ಸಂಪೂರ್ಣ ಹಾಜರಾತಿ ಶಾಲೆಯನ್ನಾಗಿ ಮಾಡುವುದು. ಅದಕ್ಕೆ ಪೂರಕವಾದ ಎಲ್ಲಾ ಚಟುವಟಿಕೆಯನ್ನು ಕ್ಲಬ್ ಮುಖಾಂತರ ಶಾಲೆಯಲ್ಲಿ ಹಮ್ಮಿಕೊಳ್ಳುವುದು.

ಇದನ್ನೇ ಆದೇಶವೆಂದು ತಿಳಿದು ದಾವಣಗೆರೆ ಜಿಲ್ಲೆಯ ಎಲ್ಲಾ ಸರಕಾರಿ ಶಾಲೆ, ಅನುದಾನ ಸಹಿತ ಮತ್ತು ಅನುದಾನ ರಹಿತ ಶಾಲೆಗಳಲ್ಲಿ ಈ ಮೇಲೆ ತಿಳಿಸಿದಂತೆ ಮಕ್ಕಳ ಹಕ್ಕುಗಳ ಕ್ಲಬ್ ರಚಿಸಿ ಅನುಷ್ಠಾನ ಮಾಡಲು ಈ ಮೂಲಕ ಸೂಚಿಸಲಾಗಿದೆ.

ಜಿಲ್ಲಾಧಿಕಾರಿಗಳು / ಅಧ್ಯಕ್ಷರು
ಯುನಿಸೆಫ್ ಬಾ.ಕಾ.ಪ.ನಿ.ಬಿ. ಕ್ರಿಯಾ ಯೋಜನೆ, ದಾವಣಗೆರೆ.

- ಸಹಿ -

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ್
ದಾವಣಗೆರೆ.

ಉಪನಿರ್ದೇಶಕರು
ಸಾರ್ವಜನಿಕ ಶಿಕ್ಷಣ ಇಲಾಖೆ
ದಾವಣಗೆರೆ.